ಶ್ರೀ ಜಗದ್ಗುರು ಅನ್ನದಾನೀಶ್ವರ ಗ್ರಂಥಮಾಲೆ

# ಹಾಲ ತೊರೆ

ಮಹಾಲಿಂಗ ಯಾಳಗಿ

ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ
ಮುಂಡರಗಿ-೫೮೨ ೧೧೮.

ಡಾ॥ ದೇವೇಂದ್ರಕುಮಾರ ಹಕಾರಿ
ಎಂ. ಎ. ಪಿಎಚ್‌ಡಿ

ಕನ್ನಡ ಅಧ್ಯಯನ ಪೀಠ

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಸನ್ಮಿತ್ರ ಶ್ರೀ ಮಹಾಲಿಂಗ ಯಾಳಗಿ

ವಂದನೆ, ನೀವು ವಿಶ್ವಾಸದಿಂದ ಕಳಿಸಿದ 'ಹಾಲತೊರೆ' ನೋಡಿ ಹಾಲು ಕುಡಿದಷ್ಟು ಸಂತೃಪ್ತಿಯಾಯಿತು. ನಿಮ್ಮಿಂದ ಇಂಥದೇನನ್ನೊ ನಿರೀಕ್ಷಿಸಿದ್ದ ನನಗೆ ಈ ಕೃತಿ ನಿಜವಾಗಿಯೂ ಖುಷಿ ಕೊಟ್ಟಿತು. ಪೂಜ್ಯ ಜಗದ್ಗುರುಗಳು ತಮ್ಮ ಶ್ರೀ ವಾಣಿಯಲ್ಲಿ ಸೂಚಿಸಿದಂತೆ ಇಲ್ಲಿಯ ಬರವಣಿಗೆಯಲ್ಲಿ ನಿಮ್ಮ 'ಸತತ ಅಧ್ಯಯನ ಹಾಗೂ ಚಿಂತನ' ಹಾಸು ಹೊಕ್ಕಾಗಿವೆ.

೧೨ ನೆಯ ಶತಮಾನದ ವಚನ ರಚನೆ ಕೇವಲ ಸಾಹಿತ್ಯಕ ಕಾರಣಕ್ಕಾಗಿ ಮೂಡಿ ಬಂದದ್ದಲ್ಲ. ಶಿವಶರಣರು ಕೈಕೊಂಡ ಸಾಮಾಜಿಕ ಕ್ರಾಂತಿ, ಕಾಯಕ ಸಿದ್ಧಾಂತದ ಮೂಲಕ ಮಾನವ ಸಮುದಾಯವನ್ನು ಮಾನವೀಕರಣಗೊಳಿಸುವ ಮಹತ್ತರ ಮೌಲ್ಯಗಳ-ಸಂಕಲ್ಪಗಳ ಸಂಕೇತವಾಗಿ ಅದು ಮೂಡಿ ಬಂದದ್ದು ನಿಮಗೂ ತಿಳಿದದ್ದೇ.

ಆಧುನಿಕ ವಚನಕಾರರಿಗೆ ಅಂದಿನ ವಚನಕಾರರ ಜೀವನ ಶುದ್ಧಿ, ಧಾರ್ಮಿಕ ಶ್ರದ್ಧೆ, ಉದಾತ್ತ ಆಚಾರಗಳ ಪ್ರೇರಕ ಶಕ್ತಿ ಶೂನ್ಯ ಎನ್ನುವದು ಬಹುಮಟ್ಟಿಗೆ ನಿಜ.

ವಚನ ವಲ್ಲರಿ, ಚಿತ್ಸ್ವನನ ಮುಂತಾದ ಒಂದೆರಡು ವಿರಳ ಕೃತಿಗಳು ಇದ್ದರೂ ಸಮಕಾಲೀನ ಜೀವನದಲ್ಲಿಯೂ ವಚನ ಸಾಹಿತ್ಯ ಪ್ರಕಾರ ಒಂದಿಷ್ಟು ಜನಪ್ರಿಯ ದಂಕರಿಯಾಗಿ ಮೂಡಿ ಬಂದಿದೆ. ನೀವು ಈ ದಿಸೆಯಲ್ಲಿ ಮಾಡಿರುವ ಈ ವಿಮರ್ಶೆಯ ಧೋರಣೆ ಚೆನ್ನಾಗಿದ್ದು ನಿಮ್ಮ ಅಧ್ಯಯನ ಇನ್ನೂ ಹೆಚ್ಚು ಫಲಪ್ರದವಾಗಿ ಮುಂದುವರೆಯಲಿ ಎಂದು ಹಾರೈಸುವೆ.

ದಿ. ೭ ೧೦.೮೭ ದೇವೇಂದ್ರಕುಮಾರ ಹಕಾರಿ

ಶ್ರೀ ಜಗದ್ಗುರು ಅನ್ನದಾನೀಶ್ವರ ಗ್ರಂಥಮಾಲೆಯ

ಮೂವತ್ತೆಂಟನೆಯ ಕುಸುಮ

# ಹಾಲ ತೊರೆ

(ಆಧುನಿಕ ವಚನಕಾರರ ವಚನಗಳ ಪ್ರಾಯೋಗಿಕ ವಿಮರ್ಶೆ)

[illegible] ಡಾ॥ ಸಿದ್ಧಯ್ಯ ಪುರಾಣಿಕರ
ಬೆಂಗಳೂರ
ಅವರಿಗೆ
ಗೌರವಾದರಗಳೊಂದಿಗೆ
– ಮಹಾಲಿಂಗ [illegible]
[illegible]





ಲೇಖಕರು :

ಮಹಾಲಿಂಗ ಯಾಳಗಿ ಎಂ. ಎ. ಬಿ. ಇಡಿ
ಕನ್ನಡ ಉಪನ್ಯಾಸಕ
ಜಗದ್ಗುರು ಅನ್ನದಾನೀಶ್ವರ ಪದವೀ ಪೂರ್ವ ಮಹಾವಿದ್ಯಾಲಯ
ಮುಂಡರಗಿ, ೫೮೨ ೧೧೮



೧೯೮೭

ಪ್ರಕಾಶಕರು
ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ
ಮುಂಡರಗಿ, ಜಿಲ್ಲಾ :- ಧಾರವಾಡ.

# ಹಾಲತೊರೆಯ ಒಡಲಲ್ಲಿ


- ಶ್ರೀ ವಾಣಿ
- ಮುನ್ನುಡಿ ಮಣಿಹ
- ನಿವೇದನೆ
- ಗ್ರಂಥದಾನಿಗಳ ಕಿರು ಪರಿಚಯ
- ಸಮರ್ಪಣೆ

೧) ವಚನೋದ್ಯಾನದಲ್ಲಿ ವಿಹಾರ ೧—೨೪
—ವಚನೋದ್ಯಾನ— ಡಾ. ಸಿದ್ಧಯ್ಯ ಪುರಾಣಿಕ

೨) ಚಿತ್ಸುಮನ ಅರಳಿದಾಗ ೨೫—೪೩
—ಚಿತ್ಸುಮನ ಮೂಜಗಂ

೩) ವಚನವಲ್ಲರಿಯಲ್ಲಿ ವೀರಶೈವ ಧರ್ಮ ೪೪—೬೩
—ವಚನವಲ್ಲರಿ— ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು

೪) ಉಪ್ಪು ಕಡಲಿನ ಆಳದಲ್ಲಿ ೬೪—೮೫
—ಉಪ್ಪು ಕಡಲು—ಪ್ರೊ. ಎಸ್. ವ್ಹಿ. ಪರಮೇಶ್ವರ ಭಟ್ಟ

೫) ಕರುಣ ಕಿರಣದ ಬೆಳಕಿನಲ್ಲಿ ೮೬—೧೦೫
—ಕರುಣ ಕಿರಣ- ಶ್ರೀಮತಿ ಶಿವಲಿಂಗಮ್ಮ ಕಟ್ಟಿ

೬) ಮಣಿವಚನಗಳಲ್ಲಿ ಮೂಡಿ ಬಂದ ಸಿದ್ಧಾಂತ ಕಾಂತಿ ೧೦೬—೧೨೮
—ಮಣಿವಚನಗಳು— ಡಾ|| ಜಚನಿ

೭ ವಚನ ತೀರ್ಥದಲ್ಲಿ ಮಿಂದಾಗ ೧೨೯—೧೫೪
—ವಚನ ತೀರ್ಥ- ಶಿವಕವಿ ಸಂಗಮೇಶ ಹೊಸಮನಿ

೮) ವಚನಾಂಜಲಿಯಲ್ಲಿ ಭಕ್ತಿ ಸುಮನ ೧೫೫—೧೭೦
—ವಚನಾಂಜಲಿ - ಶ್ರೀಮತಿ ಗಂಗಮ್ಮ ಹೊಸಮನಿ






ಪರಮ ಪೂಜ್ಯ

ಲಿಂ. ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಶಿವಯೋಗಿಗಳ
ದಿವ್ಯ ಚರಣಗಳಿಗೆ
'ಹಾಲತೊರೆ' ಕೃತಿ ಭಕ್ತಿಪೂರ್ವಕ ಸಮರ್ಪಣೆ

—ಮಹಾಲಿಂಗ ಯಾಳಗಿ.

# ವಚನೋದ್ಯಾನದಲ್ಲಿ ವಿಹಾರ

ಆಧುನಿಕ ವಚನ ಸಾಹಿತ್ಯದಲ್ಲಿ ಡಾ|| ಸಿದ್ಧಯ್ಯ ಪುರಾಣಿಕರ "ವಚನೋದ್ಯಾನ" ಒಂದು ಶ್ರೇಷ್ಠ ಕೃತಿ. ಕಾವ್ಯಾನಂದರೆಂಬ ಕಾವ್ಯನಾಮದಿಂದ ಸಾರಸ್ವತ ಪ್ರಪಂಚದಲ್ಲಿ ಚಿರಪರಿಚಿತರಾಗಿರುವ ಪುರಾಣಿಕರು ಕವಿ. ದಾರ್ಶನಿಕ. ಅನುಭಾವಿ ಈ ಮೂರರ ತ್ರಿವೇಣಿ ಸಂಗಮ. ಜಲಪಾತದಿಂದ ಪ್ರಾರಂಭವಾದ ಕಾವ್ಯಾನಂದರ ಕಾವ್ಯಧಾರೆ 'ಕರುಣಾ ಶ್ರಾವಣ'ದಲ್ಲಿ 'ಮಾನಸ ಸರೋವರ'ವಾಗಿ 'ಕಲ್ಲೋಲ ಮಾಲೆ'ಗಳನ್ನೆಬ್ಬಿಸಿ 'ವಚನೋದ್ಯಾನ'ವೆಂಬ ವಚನ ನಂದನವನ್ನು ನಿರ್ಮಿಸಿದೆ. 'ಶರಣ ಚರಿತಾಮೃತ' ಸಿದ್ಧರಾಮ, ಹರ್ಡೇಕರ ಮಂಜಪ್ಪನವರು, ನಜೀರ ಅಕಬರಾ ಬಾದಿ, ಮಿರ್ಜಾ ಗಾಲಿಬ' ಮುಂತಾದ ಚರಿತ್ರೆಗಳನ್ನಲ್ಲದೆ ಆತ್ಮಾರ್ಪಣ, ಭಾರತ ವೀರ, ರಜತ ರೇಖೆ, ನಿರ್ಬಂಧನ ನಾಟಕಗಳನ್ನು ಬರೆದು ನಾಟಕಕಾರರಾಗಿದ್ದಂತೆ ತಾವೇ ಬರೆದ ನಾಟಕಗಳಲ್ಲಿ ಅಭಿನಯಿಸಿ ಒಂದು ಕಾಲಕ್ಕೆ ನಟರೂ ಎಂದು ಪ್ರಸಿದ್ಧರಾಗಿದ್ದರು. ತ್ರಿಭುವನ ಮಲ್ಲ ಕಾದಂಬರಿಯ ಜೊತೆಗೆ ಕಿರುಗತೆ, ಮಕ್ಕಳ ಪದಗಳನ್ನು ಬರೆದು ಗದ್ಯದಲ್ಲಿಯೂ ಸಿದ್ಧ ಹಸ್ತರೆಂಬುದನ್ನು ಎಲ್ಲರೂ ಬಲ್ಲರು.

ಈ ಶಿವಕಾರುಣ್ಯ ಕವಿಯ ಪ್ರತಿಭಾ ವಿಕಸನದ ಮೂಲ ಅವರು ಬಾಳಿ ಬದುಕಿದ ಪರಂಪರೆಯಲ್ಲಿ ಅಡಗಿದೆ. ಕಾವ್ಯಾನಂದರು ಇಂದು ಬೆಂಗಳೂರ ನಿವಾಸಿಗಳಾಗಿದ್ದರೂ ಮೂಲತಃ ಹಿಂದೆ ಹೈದರಾಬಾದ ಸಂಸ್ಥಾನಕ್ಕೆ ಸೇರಿದ್ದ ರಾಯಚೂರ ಜಿಲ್ಲೆಯ ಯಲಬುರ್ಗಾ ತಾಲೂಕಿನ ದ್ಯಾಂಪೂರಿನವರು. ಅಜ್ಜ ಕವಿರತ್ನ ಚೆನ್ನಕವಿಗಳು, ಕವಿಗಳೂ ಪುರಾಣಿಕರೂ ಆಗಿದ್ದರು. ತಂದೆ ಪಂ. ಕಲ್ಲಿನಾಥ ಶಾಸ್ತ್ರಿಗಳಂತೂ ಸುಪ್ರಸಿದ್ಧ ಪುರಾಣಕಾರರು; ಅಲ್ಲದೆ ಪುರಾಣ ಕರ್ತೃಗಳೂ ಕೂಡ. ಸುಮಾರು ೩೫ ವರ್ಷಗಳ ಹಿಂದೆ ಮೃಡಗಿರಿಯ ಜಗದ್ಗುರು ಲಿಂ. ಅನ್ನದಾನ ಮಹಾಶಿವಯೋಗಿಗಳವರ ಆಶ್ರಯದಲ್ಲಿ ಕಲಬುರ್ಗಿ ಶರಣಬಸವೇಶ್ವರ ಪುರಾಣವನ್ನು ರಚಿಸಿ ಪ್ರಕಟಿಸಿದ ಪರಿಣಾಮ ಅನುಪಮ. ವೀರಶೈವ ಧರ್ಮದ ಆಳವಾದ ಅಧ್ಯಯನ, ಬಸವಾದಿ ಪ್ರಮಥರ ವಚನಗಳ ಪ್ರಭಾವ. ಮನೆತನದ ಪರಂಪರೆಯಿಂದ ಬಂದ ಸಂಸ್ಕಾರ ಹಾಗೂ ಸಂಸ್ಕೃತಿಗಳು ಅವರ ಬದುಕನ್ನೇ ಶರಣ ಜೀವನಕ್ಕೆ ಪರಿವರ್ತಿಸಿದವು. ನಾಡಿನ ಅಸಂಖ್ಯಾತ ಮಹಾ ಮಹಾ ಸ್ವಾಮಿಗಳವರ ಪುರಾಣಗಳನ್ನು ರಚಿಸಿದ ಕೀರ್ತಿ ಅವರ ಮನೆತನದ್ದು. ತಾತ, ತಂದೆಯರ ಚಾರಿತ್ರ್ಯ ಪೂರ್ಣ ಬದುಕಿದ ಸಾಕಾರ ರೂಪವೇ ಕಾವ್ಯಾನಂದರು.

ಕಾವ್ಯಾನಂದರ ಅಭ್ಯಾಸ ದ್ಯಾಂಪುರದಿಂದ ಪ್ರಾರಂಭವಾಗಿ ಚಿಕೇನಕೊಪ್ಪ, ಕುಕನೂರ, ಗುಲ್ಬರ್ಗಾ ಹೈದರಾಬಾದಿನಲ್ಲಿ ಕೊನೆಗೊಂಡಿತು. ಹೈದರಾಬಾದ ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಕಲಾ ಹಾಗೂ ಕಾಯಿದೆ ಪದವೀಧರರಾದ ಶ್ರೀ ಸಿದ್ದಯ್ಯನವರು ವಿದ್ಯಾರ್ಥಿದೆಸೆಯಿಂದಲೇ ಬರೆಯುವ ಗೀಳನ್ನು ಹಚ್ಚಿಕೊಂಡವರು. ಕಲಬುರ್ಗಿಯಲ್ಲಿ ಇನ್ನೂ ವಿದ್ಯಾರ್ಥಿದೆಸೆಯಲ್ಲಿರುವಾಗ ಮಹಾತ್ಮಾ ಬಸವಣ್ಣನವರನ್ನು ಕುರಿತ 'ಆತ್ಮಾರ್ಪಣೆ' ಎಂಬ ನಾಟಕವನ್ನು ಬರೆದುದಲ್ಲದೆ ಹಲವಾರು ಮಿತ್ರರೊಂದಿಗೆ ನಾಟಕವನ್ನಾಡಿದರು. ಅದರಲ್ಲಿ ಬಸವಣ್ಣನವರ ಪಾತ್ರವನ್ನು ಅಭಿನಯಿಸಿದರು. ಅದು ಕೇವಲ ಪಾತ್ರವಾಗದೆ ಸಕಲರ ಪ್ರಶಂಸೆಗೂ ಪಾತ್ರವಾಯಿತು.

ಡಾ|| ಸಿದ್ದಯ್ಯ ಪುರಾಣಿಕರು ಪ್ರಸಿದ್ಧ ಕವಿಗಳೂ ಸಾಹಿತಿಗಳೂ ಆಗಿರುವಂತೆ ದಕ್ಷ ಆಡಳಿತಗಾರರೂ ಹೌದು. ತಹಶೀಲದಾರ ಹುದ್ದೆಯಿಂದ ಪ್ರಾರಂಭವಾದ ಅವರ ನೌಕರಿ ಸೇವೆ ಹೈದರಾಬಾದ ಸಂಸ್ಥಾನದ ವಿಲೀನೀಕರಣದ ನಂತರ ಕರ್ನಾಟಕ ಸರಕಾರದಲ್ಲಿ ಜಿಲ್ಲಾಧಿಕಾರಿಗಳಾಗಿ, ಲೇಬರ್ ಕಮೀಶನರರಾಗಿ ನಿವೃತ್ತಿ ಹೊಂದುವ ವರೆಗೆ ನಡೆಯಿತು. ಸರಕಾರಿ ನೌಕರಿಯಿಂದ ನಿವೃತ್ತಿ ಹೊಂದಿದ್ದರೂ ಸಾಹಿತ್ಯ ರಚನೆಯಿಂದ ನಿವೃತ್ತಿ ಹೊಂದದೇ ಇರುವದು ಕನ್ನಡ ನಾಡವರ ಪುಣ್ಯ. ಸರಕಾರಿ ಸೇವೆಯಲ್ಲಿರುವಾಗ ಪ್ರಾಮಾಣಿಕವಾಗಿ ದುಡಿದು ದಕ್ಷ ಆಡಳಿತಗಾರರೆಂದು ಹೆಸರು ಪಡೆದು ನಿಷ್ಕಳಂಕ ಚಾರಿತ್ರ್ಯವನ್ನುಳಿಸಿಕೊಂಡ ವಿರಳ ಅಧಿಕಾರಿ. ಕವಿಯಾಗಿ ಕಾವ್ಯಾನುಭವ ಪಡೆದಂತೆ ಲೋಕಸೇವಕರಾಗಿ ಲೋಕಾನುಭವವನ್ನು ಪಡೆದುಕೊಂಡು ತಮ್ಮ ಸಾಹಿತ್ಯದ ಮೂಲಕ ತನಿರಸವನ್ನೆರೆದವರು. ಸಹಜ ಸೌಜನ್ಯ, ಸದ್ವಿನಯ, ಸ್ನಿಗ್ಧ ಸ್ನೇಹ ಈ ಸದ್ಗುಣಗಳ ಸಾಕಾರ ಮೂರ್ತಿಯೇ ಸಿದ್ದಯ್ಯ ಪುರಾಣಿಕರು. ಈ ಗುಣಗಳೇ ಅವರ ವ್ಯಕ್ತಿತ್ವವನ್ನು ಸಿದ್ಧಿಯ ಶಿಖರಕ್ಕೇರಿಸಿವೆ.

'ವಚನೋದ್ಯಾನ' ೫೨೫ ವಚನಗಳ ಸಂಕಲನ. ೧೯೭೭ ರಲ್ಲಿ ಪ್ರಕಟಗೊಂಡ ಈ ಸಂಕಲನದ ಹಲವಾರು ವಚನಗಳು ಬಿಡಿ ಬಿಡಿಯಾಗಿ 'ಜೀವನ ವಿಕಾಸ' ಮಾಸ ಪತ್ರಿಕೆಯಲ್ಲಿ ಆಗಾಗ್ಗೆ ಪ್ರಕಟಗೊಂಡಿದ್ದವು. ಅವು ಇಡಿಯಾಗಿ "ವಚನೋದ್ಯಾನ"ವೆಂಬ ಗ್ರಂಥರೂಪದಲ್ಲಿ ಪ್ರಕಟಗೊಂಡಾಗ ಸಹೃದಯರ ಮನವನ್ನು ಸೆಳೆಯಿತಷ್ಟೇ ಅಲ್ಲ, ಭಾರತೀಯ ಭಾಷಾ ಪರಿಷತ್ತಿನ ಆಶ್ರಯದಲ್ಲಿ ದಕ್ಷಿಣ ಭಾಷೆಗಳಿಗಾಗಿರುವ ರಾಷ್ಟ್ರೀಯ ಬಹುಮಾನ "ಭಿಲ್ವಾರ" ಪ್ರಶಸ್ತಿಯನ್ನು ಪಡೆದುಕೊಂಡ ಸೌಭಾಗ್ಯ ಈ ಗ್ರಂಥದ್ದು. ಇದರ ಬಹುಮಾನದ ಮೊತ್ತ ೧೧೦೦೦, ರೂ. ಗಳು. ಒಮ್ಮೆ ದೊರೆತ ಭಾಷೆಗೆ ಮತ್ತೆ ಮೂರು ವರ್ಷಗಳ ವರೆಗೆ ಇದು ದೊರೆಯುವಂತಿಲ್ಲ.

ಈ "ವಚನೋದ್ಯಾನ"ದಲ್ಲಿ ವಿಹಾರ ಕೈಕೊಂಡಾಗ ೫೨೫ ವಿವಿಧ ಸೌರಭವುಳ್ಳ, ವಚನ ಕುಸುಮಗಳ ಕಂಪನ್ನು ಆಘ್ರಾಣಿಸಿ ಆನಂದಪಡಬಹುದಾಗಿದೆ.



...ರಂತನರು ಹೇಳುವಂತೆ "ಈ ವಚನಗಳಲ್ಲಿ ಶರಣ ಸಂಪ್ರದಾಯದ, ಶಕ್ತಿ ವಿಶಿಷ್ಟಾ...ತದ ಆಧ್ಯಾತ್ಮ ಚಿಂತನೆಯಿದೆ. ಲೋಕಾನುಭವದ ತೀವ್ರ ಸ್ಪಂದನವಿದೆ. ಸಾಮಾಜಿಕ ಓರೆ-ಕೋರೆಗಳ ಅನ್ಯಾಯ-ಅನಾಚಾರಗಳ ನಗ್ನ ಚಿತ್ರಣದ ಜೊತೆಗೆ ಮರ್ಮಭೇದಕ ಚಾಟೂಕ್ತಿಯಿದೆ. ಮಾನವೀಯ ಮೌಲ್ಯಗಳ ಉತ್ಕರ್ಷದ ಕಳಕಳಿಯಿದೆ. ವೈಜ್ಞಾನಿಕ ಸಂಪತ್ತಿನ ಗಾಢ ಚರ್ಚೆಯಿದೆ. ಸಮತಿ – ಸೌಹಾರ್ದ ಮುಂತಾದ ಗುಣ ವಿಶೇಷಗಳ ಅನುಷ್ಠಾನದ ಬಗೆಗೆ ಆಸಕ್ತಿಯಿದೆ. ಎಲ್ಲಕ್ಕಿಂತ ಹೆಚ್ಚಾಗಿ ನಿಷ್ಕಲಂಕ ಹೃದಯದ ಶುದ್ಧಾತ್ಮ ಚೇತನದ ಅಂತಃಕರಣದ ಮಿಡಿತವಿದೆ. ಕನಿಷ್ಟ ನಾಲ್ಕು ಚರಣಗಳಿಂದ ಗರಿಷ್ಟ ಇಪ್ಪತ್ತೇಳು ಚರಣಗಳ ಗಾತ್ರವುಳ್ಳ ಈ ವಚನ ಬಂಧಗಳು-ಗೀತೆಗಳು. ಭಾವದಲ್ಲಿ ವಾಮನ-ತ್ರಿವಿಕ್ರಮಾವತಾರವನ್ನು ತಾಳಿವೆ. ಹನ್ನೆರಡನೆಯ ಶತಮಾನದ ವಚನ ಸಾಹಿತ್ಯಕ್ಕೆ ಸರಿದೊರೆಯಾದುದು ಇಪ್ಪತ್ತನೆಯ ಶತಮಾನದಲ್ಲೂ ಮೂಡಬಲ್ಲುದು ಎಂಬ ಆಶಾಜ್ಯೋತಿಯ ಕಾಂತಿಯನ್ನು ಪಸರಿಸಿವೆ." ಸ್ವತಂತ್ರ ವಿಚಾರಧಾರೆಯುಳ್ಳ ಧೀರತನದಿಂದ ಬದುಕಿನಲ್ಲಿ ಹೋರಾಟ ನಡೆಸಿ ಸಿದ್ಧಿಯ ಮುಖಾಂತರ ಈಶ್ವರ ಸಾಕ್ಷಾತ್ಕಾರ ಪಡೆದುಕೊಂಡದ್ದರಿಂದಲೋ ಏನೋ ಇವರು ತಮ್ಮ ವಚನಗಳಿಗೆ "ಸ್ವತಂತ್ರ ಧೀರ ಸಿದ್ಧೇಶ್ವರ" ಎಂಬ ಅಂಕಿತವನ್ನು ಇಟ್ಟುಕೊಂಡಿರುವದು ಅವರ ಜೀವನಕ್ಕೆ ಹಿಡಿದ ಕೈಗನ್ನಡಿ. ಈ ಕೈಗನ್ನಡಿ ರನ್ನಗನ್ನಡಿಯಾಗಿ ಕಾವ್ಯಾನಂದರಿಂದ ವಚನ ರತ್ನ ಪ್ರಭೆಯನ್ನು ಬಿಂಬಿಸುವಲ್ಲಿ ಸಮರ್ಥವಾಗಿದೆ.

ವಚನೋದ್ಯಾನವನ್ನು ಪ್ರವೇಶ ಮಾಡುವ ಹೆಬ್ಬಾಗಿಲಲ್ಲೇ ಆಧ್ಯಾತ್ಮದ ದರ್ಶನ. ಆತ್ಮ-ಪರಮಾತ್ಮರು ಬೇರೆ ಬೇರೆಯಲ್ಲ. ಎಲ್ಲಿ ಆತ್ಮವಿದೆಯೋ ಅಲ್ಲಿ ಪರಮಾತ್ಮನಿದ್ದಾನೆ. ಎಲ್ಲಿ ಪರಮಾತ್ಮನಿದ್ದಾನೋ ಅಲ್ಲಿ ಆತ್ಮವಿರಲೇಬೇಕು. ನಾನು ಎಂಬುದು ಜೀವಾತ್ಮದ ಸಂಕೇತವಾದರೆ ನೀನು ಆ ಪರಮಾತ್ಮನ ಸಂಕೇತ. ನಾನು ನೀನು (ಪರಮಾತ್ಮ-ಜೀವಾತ್ಮ) ಕೂಡಿಯೇ ಇದ್ದೆವು ಎಂಬುದನ್ನು

"ನೀನಿಲ್ಲದ ಮುನ್ನ ನಾನಿದ್ದೆನೆಂದು
ನಂಬದಯ್ಯ ನನ್ನ ಮನವು.
ನಾನಿಲ್ಲದ ಮುನ್ನ ನೀನಿದ್ದೆಯೆಂದು
ನಂಬದಯ್ಯ ನನ್ನ ಮನವು

ನಾ. ನೀ ಎಂಬ ಉಭಯವಿಲ್ಲದ ಮುನ್ನ
ಏನಿದ್ದೆನೆಂಬುದು
ಏನೆಂದೊರೆವೆನಯ್ಯ
ಸ್ವತಂತ್ರ ಧೀರ ಸಿದ್ಧೇಶ್ವರಾ"

ಸಾ - ಎಂಬುದು ನೀ, ನಾನೀ ಇಲ್ಲದಾಗ ಏನಿತ್ತೆಂಬುದು ಸ್ವತಂತ್ರ ಧೀರ ಸಿದ್ಧೇಶ್ವರನಿಗೆ ಮಾತ್ರ ಗೊತ್ತು. ಮಣ್ಣು ಬಿಟ್ಟು ಮಡಿಕೆ ಇಲ್ಲ. ತನ್ನ ಬಿಟ್ಟು ದೇವರಿಲ್ಲ ಎಂಬುದನ್ನೇ ಇಲ್ಲಿ ಪ್ರತಿಭಾದೃಷ್ಟಿಯಿಂದ ಪ್ರತಿಪಾದಿಸಿದ್ದಾರೆ ಶಾಪ್ಯಾನಂದರು.

ಮುಂದಿನ ವಚನದಲ್ಲಿ ಕೂಡ ಇದೇ ಭಾವ ಇನ್ನಷ್ಟು ಗಾಢವಾಗಿ ಹೆಪ್ಪುಗಟ್ಟಿದೆ.

"ನಿನ್ನ ನಾಮಕರಣೋತ್ಸವಕ್ಕೆ
ನೀನೆನ್ನ ಕರೆಸದಿದ್ದರೂ
ನಾನಲ್ಲಿ ಇದ್ದೆನಯ್ಯ"

ಇಲ್ಲಿ ನಾಮಕರಣೋತ್ಸವಕ್ಕಾಗಿ ಬಂದ ಮುತ್ತೈದೆಯರು, ಹುಟ್ಟು-ಸಾವುಗಳಿಗೆ ಕಟಿಬದ್ಧರಲ್ಲ, ಅದನ್ನು ಮೆಟ್ಟಿ ನಿಂತವರು. ಮನುಷ್ಯತ್ವ, ಮುಮುಕ್ಷತ್ವ, ಜಿಜ್ಞಾಸೆ, ಶ್ರದ್ಧೆ ಹಾಗೂ ಶಿವರತಿಯರೆಂಬ ಈ ಮುತ್ತೈದೆಯರೈವರು ಸ್ವತಂತ್ರ ಧೀರ ಸಿದ್ಧೇಶ್ವರನಿಗೆ 'ಲಿಂಗ' ವೆಂದು ನಾಮಕರಣ ಮಾಡಿದಾಗ ಅಲ್ಲಿ ಇವರು (ಜೀವಾತ್ಮ) ಅಂಗವಾಗಿದ್ದರೆಂಬುದನ್ನು ಸುಂದರವಾಗಿ ಅಷ್ಟೇ ತಾತ್ವಿಕವಾಗಿ ವ್ಯಕ್ತಪಡಿಸಿದ್ದಾರೆ.

ಶಿವಾನುಭವಿಗಳಾದ ಡಾ। ಸಿದ್ಧಯ್ಯ ಪುರಾಣಿಕರು ದೇವತತ್ವ ಹಾಗೂ ಜೀವತತ್ವಗಳ ರಹಸ್ಯವನ್ನು ಅರಿತುಕೊಳ್ಳುವಲ್ಲಿ ಸಾಕಷ್ಟು ಆಸಕ್ತಿ ತೋರಿದ್ದಾರೆ. ಜೀವೋ-ತ್ಪತ್ತಿಗಿಂತ ಮೊದಲು ಆ ಸ್ವತಂತ್ರಧೀರ ಸಿದ್ಧೇಶ್ವರ (ಪರಮಾತ್ಮ) ಹೇಗಿದ್ದನೆಂಬುದನ್ನು ಹೇಳುವಾಗ ಆ ವಚನಕಾರರ ಕಲ್ಪನೆ ಗರಿಗೆದರಿ ಲೌಕಿಕ, ಪಾರಮಾರ್ಥಿಕಗಳೆರಡನ್ನೂ ಆವರಿಸಿಕೊಂಡಿದೆ.

"ನಾನು ಹುಟ್ಟುವ ಮುನ್ನ
ನೀನು ಹೇಗಿದ್ದೆಯಯ್ಯಾ"

ಎಂದು ಕೇಳಿದ ಜೀವ, ಜೀವೋತ್ಪತ್ತಿಗಿಂತ ಹಿಂದೆ ಸಾಗಿದ್ದಾನೆ. ಶಬ್ದ ಹುಟ್ಟುವದಕ್ಕಿಂತ ಮೊದಲೇ ಹುಟ್ಟಿದ ಅರ್ಥ, ವಾದ್ಯಕ್ಕಿಂತ ಮೊದಲಿದ್ದ ನಾದ, ಕುಂಚ ಹುಟ್ಟುವದಕ್ಕಿಂತ ಮುನ್ನವೇ ಉದಿಸಿದ ಚಿತ್ರ, ಉಳಿಗಿಂತ ಮೊದಲೇ ಹುಟ್ಟಿದ ಶಿಲ್ಪ ಹೇಗೆ ಇದ್ದವೋ ಹಾಗೆ ಈ ದೇಹ (ಜೀವಾತ್ಮ) ಹುಟ್ಟುವದಕ್ಕಿಂತ ಮೊದಲೇ ಇದ್ದ ಪ್ರಾಣದಂತೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಇವು ಶಾಪ್ಯಾನಂದರ ಆತ್ಮಗೀತೆಗಳು.

ಹರಿ-ಹರರಲ್ಲಿ ಭೇದವಿಲ್ಲ. ಮನುಷ್ಯ ತನ್ನ ಸ್ವಾರ್ಥಕ್ಕೋಸ್ಕರ ಆ ದೇವನಲ್ಲಿ ಸಹ ತಾರತಮ್ಯವನ್ನು ಸೃಷ್ಟಿಸುತ್ತಾನೆ. ಎಲ್ಲವೂ ಎಲ್ಲಕ್ಕೂ ಆ ಪರಾತ್ಪರ ಅಖಂಡ ಸತ್ಯವೇ ಮೂಲ ಕಾರಣ. ಆದರೂ ಹುಟ್ಟಿಗೊಂದು ಜಾತಿ, ಬಟ್ಟೆಗೊಂದು ಜಾತಿ.



ಜಾತಿ-ಜಾತಿಗಳ ಜಾಲವನ್ನೇ ಸೃಷ್ಟಿಸಿ ಅವರ ಮೂಲಕ ಮಾನವ ಮಾನವರಲ್ಲಿ ನಡೆದಿರುವ ಸೆಣಸಾಟಗಳಿಗೆ ಎಣೆಯಿಲ್ಲ ಮಾನವನು ದಾನವನಾಗಿದ್ದಾನೆ. ಜಾತಿಯ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ನಡೆದಷ್ಟು ಶೋಷಣೆ, ಅನ್ಯಾಯ, ಯುದ್ಧಗಳು ಇನ್ನಾವುದರ ಹೆಸರಿನಿಂದ ನಡೆದಿಲ್ಲವೆಂಬುದಕ್ಕೆ ನಮ್ಮ ಇತಿಹಾಸವೇ ಸಾಕ್ಷಿಯಾಗಿದೆ. ಆದರೆ ನಿಜವಾದ ಮಾನವನು ಹರಿ ಹರರಲ್ಲಿ ಎಂದಿಗೂ ಭೇದವನ್ನೆ-ಣಿಸಲಾರ. ಇದೇ ಅಭೇದವನ್ನು ಪುರಾಣಿಕರು—

"ನೀನು ಹರಿ, ನೀನು ಹರ
ನೀನು ಸಿದ್ಧ, ನೀನು ಬುದ್ಧ
ನೀನು ಯಹ್ವ, ನೀನು ಮಜ್ದ
ನೀನು ತಾವೋ, ನೀನು ದೇವ
ನೀನು ಅಲ್ಲಾ, ನೀನು ಎಲ್ಲಾ
ನೀನು ಸಾರ್ವನಾಮಿಕ, ನೀನು ಅನಾಮಿಕ
ನೀನು ಸರ್ವಗತ, ನೀನು ಸರ್ವಭರಿತ
ನೀನು ಅನುಪಮೇಯ, ನೀನು ನಿರಾಮಯ"

ಎಂದು ಜಗತ್ ಸೃಷ್ಟಿಕರ್ತನಾದ ದೇವರನ್ನು ಘಂಟಾಘೋಷವಾಗಿ ಸಾರಿದ್ದಾರೆ. "ಏಕಂ ಸತ್ ವಿಪ್ರಾ ಬಹುಧಾ ವದಂತಿ". "ದೇವನೊಬ್ಬ ನಾಮ ಹಲವು". ಆ ದೇವ ಸಾರ್ವನಾಮಿಕ ಆದರೂ ಅನಾಮಿಕ. ರೂಪರಹಿತನಾಗಿದ್ದರೂ ಎಲ್ಲ ರೂಪಗಳಲ್ಲಿಯೂ ಅಡಗಿದ್ದಾನೆ. ಆತನಿಗೆ ಬಣ್ಣವಿಲ್ಲ, ಸ್ವರವಿಲ್ಲ. ಆದರೆ ಸಕಲ ಬಣ್ಣಗಳು, ಸಕಲ ಸ್ವರಗಳು ಅವನವೇ ಆಗಿವೆ ಇಂದ್ರಿಯಕ್ಕೆ ಗೋಚರನಾಗಿದ್ದು ಇಂದ್ರಿಯಾತೀತನೂ ಆಗಿದ್ದಾನೆ. ಆದ್ದರಿಂದ ಹೆಸರಿಲ್ಲದ ಅವನನ್ನು ಯಾವ ಹೆಸರಿನಿಂದ ಕರೆದರೂ 'ಓ' ಎನ್ನುತ್ತಾನೆ. ಭಾಷೆಯಿಲ್ಲದ ಆ ದೇವನನ್ನು ಯಾವ ಭಾಷೆಯಲ್ಲಿ ಮೊರೆಯಿಟ್ಟರೂ ನಮ್ಮ ಮೊರೆಯನ್ನಾಲಿಸಿ ತನ್ನ ಕರುಣಾಮೃತವನ್ನು ಸುರಿಸುವನು. ವರ್ಣರಹಿತ, ರೂಪರಹಿತ, ಕುಲರಹಿತ ನಿಸ್ಸೀಮನಾದ ಅವನನ್ನು ಯಾರೇ ಭಕ್ತಿಯಿಂದ ಶ್ರದ್ಧೆಯಿಂದ ಓಲೈಸಿದರೂ ಒಲಿಯುತ್ತಾನೆ. ಆತನು ಭಕ್ತಾನುಕಂಪಿ; ವರ್ಣಗಳಿಗೂ ಮೀರಿದ ವರ್ಣಾತೀತ. ಜಗತ್ತಿನ ಯಾವ ಕುಲದವನೇ ಆಗಿರಲಿ, ಅವನು ಯಾವದೇ ಹೆಸರಿನಿಂದ ಕೂಗಲಿ, ಯಾವದೇ ಆಕಾರದಲ್ಲಿ ನೋಡಲಿ, ಯಾವ ರೀತಿಯಿಂದಾದರೂ ಭಜಿಸಲಿ ಆತ ನಲಿಯುತ್ತಾನೆ. ಆತನಿಗೆ ದಿಕ್ಕೇ ಇಲ್ಲ ದಿಗಂಬರ. ಎಲ್ಲ ದಿಕ್ಕುಗಳು ಅವನವೇ ಆಗಿವೆ. ಯಾವ ದಿಕ್ಕಿಗೆ ಬೇಕಾದರೂ ಅಲ್ಲಿ ಆ 'ಶಿವ'ನಿದ್ದಾನೆ. ಇಂಬಿಲ್ಲದೆ ಪ್ರತಿಯೊಂದರಲ್ಲಿ ಪ್ರತಿಯೊಬ್ಬರಲ್ಲಿ ತುಂಬಿಕೊಂಡಿರುವ ಅವನನ್ನು ಮರುಹಿನ ಅರುಹಿನ ಕುರುಹಾಗಿ ಪಡೆಯುವದೇ ಮಾನವನ ಗುರಿ.

ಪ್ರತಿಯೊಂದರಲ್ಲಿ ಆ 'ಶಿವ'ನನ್ನು ಕಾಣುವ ಶಿವದೃಷ್ಟಿಯನ್ನು ಪಡೆದಿದ್ದಾರೆ. ಈ ಶಿವಕಾರುಣ್ಯದ ಶಿವ ಕವಿ 'ರಸದಲ್ಲಿ, ವಿಷದಲ್ಲಿ, ಹುಲಿ ಹುಲ್ಲೆಯಲ್ಲಿ, ಮಳೆ ಸಿಡಿಲಿನಲ್ಲಿ, ಜೀವ ಸಾವಿನಲ್ಲಿ, ಹುಲ್ಲೆಲ್ಲಿಯೂ ಎಲ್ಲದರಲ್ಲಿಯೂ ಆ 'ಶಿವ'ನಿದ್ದಾನೆ ಎಂಬ ಅಚಲ ವಿಶ್ವಾಸ. ವಚನಕಾರರ ಆ ಶಿವ ಭಯಂಕರನೂ ಹೌದು; ರುದ್ರ, ಶಂಕರನೂ ಹೌದು. ಆ ಸ್ವತಂತ್ರ ಧೀರ ಸಿದ್ಧೇಶ್ವರ 'ಲಿಂಗ' ಸ್ವರೂಪಿಯಾಗಿ

"ಕಣ್ಣು ತೆರೆಯೆ ವಿಶ್ವಲಿಂಗ ದರ್ಶನ
ಉಸಿರಾಡಿಸೆ ವಾಯುಲಿಂಗ ಸ್ಪರ್ಶನ
ಹಸಿವಾಗೆ ಅಗ್ನಿಲಿಂಗದ ಅನುಭವ
ತೃಷೆಯಾಗೆ ಜಲಲಿಂಗದ ಅರಿವು
ನಿದ್ರೆ ಬಂದೊಡೆ ನೆಲದ ಲಿಂಗದ ಅರಿವು

"ಲಿಂಗಮಧ್ಯೆ ಜಗತ್ಸರ್ವಂ" ಎಂಬುದು ನಿಜವಾಗಿದ್ದರೂ ಅಂಗನಾದ ತನ್ನನ್ನು ತನ್ನಂತೆ ಏಕೆ ಮಾಡಿಲ್ಲವೆಂಬುವಲ್ಲಿ ಹೃದಯದ ಮೊರೆ ಮೊರೆಯಿಡುತ್ತದೆ. ಈ ವಚನ ವೀರಶೈವರ ಅಷ್ಟಾವರಣದಲ್ಲಿ ಬರುವ 'ಲಿಂಗ'ದ ವ್ಯಾಖ್ಯೆಯಂತೆ ಇದೆ.

ಆ 'ಲಿಂಗ' ದೇವನಾದರೂ ಎಂಥವನು? ಕರುಣಾಮಯಿ, ವಾತ್ಸಲ್ಯ ಸಿಂಧು. ಜೀವಿ ಜನಿಸುವ ಮುನ್ನವೇ ಆತನ ಬದುಕಿಗೆ ಅವಶ್ಯವಾದ ಪ್ರತಿಯೊಂದು ವಸ್ತುವನ್ನೂ ಸೃಷ್ಟಿಸಿದ್ದಾನೆ. ಜೀವರಾಶಿಗಳು ಜೀವಿಸಲು ಅನ್ನ, ಔಷಧಿಗಳನ್ನೂ ಹುಟ್ಟಿಸಿದಂತೆ ನದಿ, ಸರೋವರ, ಚಿಲುಮೆಗಳನ್ನು ಸೃಷ್ಟಿಸಿದ್ದಾನೆ. ಕೂಸು ಹುಟ್ಟುವ ಮುನ್ನವೇ ತಾಯಿಯ ಎದೆಯಲ್ಲಿ ಹಾಲನ್ನಿಟ್ಟ ಕರುಣಾಮಯಿ ಆತ. ಇಂಥ ವಾತ್ಸಲ್ಯಮಯನಾದ ಆ 'ಶಿವ'ನ ಸುವ್ಯವಸ್ಥೆಯನ್ನೂ ಅರಿಯದೆ ವ್ಯರ್ಥ ಪ್ರಲಾಪಿಸುತ್ತಿರುವುದು ನಿಜವಾಗಿಯೂ ವಿಷಾದಕರ.

ಶಿವಕೃಪೆಯಾದರೆ ಏನೆಲ್ಲವೂ ಆಗಬಹುದು. ಅದನ್ನೇ ವಚನಕಾರರು—

"ಎಣ್ಣೆಯಿಲ್ಲದೆ ದೀಪ ಉರಿಯಿತು
ನೀರಿಲ್ಲದೆ ನದಿಯು ಹರಿಯಿತು
ಬಳ್ಳಿಯಿಲ್ಲದೆ ಮೊಗ್ಗು ಬಿರಿಯಿತು
ಮೋಡವಿಲ್ಲದೆ ಮಳೆಯು ಸುರಿಯಿತು
ಹಸುವಿಲ್ಲದೆ ಹಾಲು ಕರೆಯಿತು
ಏನೆಂಥ ಬೆರಗು ನೆರೆಯಿತು"

ಆ ಪರಶಿವ ಕಣ್ಣುತೆರೆದರೆ ಸಾಕು. ಏನೆಲ್ಲ ಸಿದ್ಧ; ಆದರೆ ಅವನು ಕಣ್ಣು ತೆರೆಯದೆ ಇದ್ದಾಗ ಎಲ್ಲವೂ ತದ್ವಿರುದ್ಧವಾಗಬಲ್ಲದು. ಇಲ್ಲಿ ಬಸವಣ್ಣನವರ "ನೀನೊಲಿದರೆ ಕೊರಡು ಕೊನರುವದಯ್ಯ", ಎಂಬ ವಚನ ನೆನಪಿಗೆ ಬಾರದೆ ಇರದು.



ತಾಯಿಯ ಗರ್ಭದಿಂದ ಹೊರಬಿದ್ದ ಕೂಸು, ಪ್ರಕೃತಿಯ ಮಡಿಲಿನಲ್ಲಿ ಬೆಳೆಯುತ್ತ ಹೋದಂತೆ ಈ ಪ್ರಕೃತಿ ಪರಾಶಕ್ತಿ ಸ್ವರೂಪೆ ಎಂಬುದನ್ನು ಕಂಡುಕೊಳ್ಳುತ್ತದೆ. ಹೀಗೆ ಕಂಡುಂಡ ಜೀವರಾಶಿಗಳಿಗೆ ಜನ್ಮವೀಯುವ ಸೌಭಾಗ್ಯ ಈ ಭುವಿಗಲ್ಲದೆ ಮತ್ತಾರಿಗಿದೆ? ಅದ್ದರಿಂದ ಈ ಭೂ ತಾಯಿಯನ್ನು "ನೀನೆ ಆದಿ ಜಗದಿ, ನೀನೆ ಜೀವ ಗಂಗೋತ್ರಿ" ಎಂದು ಹಾಡಿ ಹೊಗಳುವದರ ಜೊತೆಗೆ ಪರಾಶಕ್ತಿಯಾದ ಪ್ರಕೃತಿ ಮಾತೆ ಒಲಿದರೆ ಏನಾಗಬಹುದೆಂಬುದನ್ನು ಸುಂದರವಾಗಿ ವಿವೇಚಿಸಿದ್ದಾರೆ.

"ಪ್ರಕೃತಿ ಮಾತೆ ಪರಾಶಕ್ತಿ ಸ್ವರೂಪೆ
ನೀನೊಲಿದರೆ
ಬ್ರಹ್ಮ ಗಿರಿಯಲ್ಲಿಯೂ ಕಾವೇರಿ ಕನ್ನಿಕೆಯರು ಉದಿಸುವರು"

ಆದರೆ ಆ ಮಹಾತಾಯಿ ಮುನಿದರೆ, ಒಲಿಯದಿದ್ದರೆ—

"ನೂರಾರು ಅಡಿ ಬೋರು ಮಾಡಿದರೂ ನೀರು ದೊರೆಯದಿರಬಹುದು"

ಅವಳು ಇಚ್ಛಿಸಿದರೆ "ಹಿಮಗಿರಿಯ ಮಡಿಲಲ್ಲಿಯೆ ಹಿಮಲಿಂಗ ಮೈದೋರಬಹುದು; ತಪ್ತ-ಕುಂಡ ತಲೆದೋರಬಹುದು" "ಮರುಳ್ಗಾಡಿನಲ್ಲಿಯೂ ಸುಧಾ ಮಧುರ ಸಲಿಲ ಸರಸಿ ಸಮುದ್ಭವಿಸಬಹುದು" ಇಚ್ಛಿಸದಿದ್ದಲ್ಲಿ "ಬೆಳೆವ ಬಯಲಿನಲ್ಲಿಯೂ ಬರ ಘೂತ್ಕರಿಸ-ಬಹುದು" "ಮೆಟ್ಟೂರು ಕನ್ನಂಬಾಡಿ ಕಟ್ಟೆಗಳ ಹೊಟ್ಟೆಗಳೂ ಬರಿದಾಗಬಹುದು."

"ಮಣ್ಣು ಹೊನ್ನಾಗಬಹುದು; ಕಲ್ಲು ರನ್ನ, ಹನಿ ಮುತ್ತಾಗಬಹುದು; ನೆಲ ಜಲವಾಗಬಹುದು ಜಲ ನೆಲವಾಗಬಹುದು" ಆ ತಾಯಿ ಮನಸ್ಸು ಮಾಡಿದರೆ ಕೋಟಿ ಕೋಟಿ ಗ್ರಹ ಗೋಲಗಳಲ್ಲಿ ಕಾಣದ ಸ್ವತಂತ್ರ ಧೀರ ಸಿದ್ಧೇಶ್ವರ ಕಾಣುವಂತಾಗುವ-ನೆಂಬುದು ವಚನಕಾರರ ಆತ್ಮ ವಿಶ್ವಾಸ.

ಮುದ-ಮೋದವನ್ನು ನೀಡುವ ಸೃಷ್ಟಿಯನ್ನು ಕಂಡು ಕವಿ ಹೃದಯ ಅದಕ್ಕೆ ಮಣಿದಿದೆ. ಆ ಚೆಲುವನ್ನು ಅನುಭವಿಸಿ ಆನಂದಿಸಿ ಬಣ್ಣಿಸಿದೆ. ತಾನು ಸೃಷ್ಟಿಯಲ್ಲಿ ಮಣ್ಣಿನ ಕಣವಾಗಿ, ಗಾಳಿಯ ಅಲೆಯಾಗಿ, ಜಲ ಬಿಂದುವಾದ ಅದರೊಂದಿಗೆ ಒಂದಾಗುವ ತವಕವನ್ನು ತೋರ್ಪಡಿಸಿದೆ. ಆದರೆ ಇಂದಿನ ಯಾಂತ್ರಿಕ ಯುಗದಲ್ಲಿ ಪ್ರಕೃತಿಯ ದಿವ್ಯ ಸೌಂದರ್ಯವನ್ನು ಕಾಣುವ ಕಣ್ಣುಗಳನ್ನು ಕಳೆದುಕೊಂಡ ಮಾನವನ ಸ್ಥಿತಿಯನ್ನು ಕಂಡು ಕವಿ ಹೃದಯ ಮಿಡಿದಿದೆ. "ಸದ್ಭಾವನೆಗಳಿಗೆ ಹೃದಯ, ಸುವಿಚಾರಗಳಿಗೆ ಚಿತ್ತ ಬತ್ತಿ" ಹೋಗಿರುವದನ್ನು ಕಂಡು ರೋಸಿಗೊಂಡು ಸೃಷ್ಟಿಯನ್ನು ಮಲಿನಗೊಳಿಸುವ ಮಾನವನ ರಾಕ್ಷಸ ಪ್ರವೃತ್ತಿಗೆ ನೊಂದು,

"ತಿನ್ನುವ ಅನ್ನ ಕುಡಿಯುವ ನೀರು
ಉಸಿರಾಡಿಸುವ ಗಾಳಿಗಳೇ ಮಲಿನವಾಗಿರುವಾಗ
ಏಳಿಗೆಗೆ ಅರ್ಥವೇನಯ್ಯ"

ಎಂದು ಏಳಿಗೆಯ ಹೆಸರಿನಲ್ಲಿ ನಡೆದಿರುವ, ನಡೆಯುತ್ತಿರುವ ಕಲಬೆರಕೆಯ ಸ್ಥಿತಿಯನ್ನು ಪ್ರಶ್ನಿಸಿದ್ದಾರೆ ವಚನಕಾರರು.

ಒಂದೆಡೆ ಶಿವನು ಸುಂದರವಾದ ಸೃಷ್ಟಿ ನಿರ್ಮಿಸಿದ್ದರೆ, ಇನ್ನೊಂದೆಡೆ ಮಾನವನು ನಾಗರಿಕತೆಯ ನೆಪದಲ್ಲಿ ಆ ಸುಂದರ ಸೃಷ್ಟಿಯನ್ನು ಕುರೂಪಗೊಳಿಸಿದ್ದಾನೆ. ನರನ ಈ ಕ್ರೂರ ಕರಾಳ ಕೃತ್ಯಕ್ಕೆ ಕೊಡುವ ಹೆಸರು ನಾಗರಿಕತೆ! ಇದು ನಿಜಕ್ಕೂ ನಾಗರಿಕತೆಯಲ್ಲ ಅನಾಗರಿಕತೆ ಎಂಬ ಆಶಯ ಕಾವ್ಯಾನಂದರದು. "ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎನ್ನುವಂತೆ ಪ್ರತಿಯೊಬ್ಬನು ತಾನು ಹುಟ್ಟಿ ಬೆಳೆದ ನಾಡಿನ ಬಗೆಗೆ ಹಾಗೂ ನುಡಿಯ ಬಗೆಗೆ ಅಭಿಮಾನ ಪಡಬೇಕಾದುದು ಅವಶ್ಯ.

'ವಚನೋದ್ಯಾನ'ದ ಪ್ರಾರಂಭದ ವಚನಗಳು ಶಿವ-ಜೀವರ ಸಂಬಂಧವನ್ನು ಕುರಿತ ವಚನಕಾರರ ಅನಿಸಿಕೆಯಾದಂತೆ ಕ್ರಮೇಣ ಅದು ಹೆಪ್ಪುಗಟ್ಟಿ ಆಧ್ಯಾತ್ಮದ ಕೆನೆಯಾಗಿದೆ. ಬರಬರುತ್ತ ಈ ಸೃಷ್ಟಿಯ ವಿರಾಟ ಸ್ವರೂಪದ ಹಿನ್ನೆಲೆಯಲ್ಲಿ ನಿಸರ್ಗದ ಒಲವು-ಚೆಲುವುಗಳಿಗೆ ವಚನಕಾರರು ಮನಸೋತಿರುವದನ್ನು ಕಾಣುತ್ತೇವೆ. ವಿಶ್ವ ಚಿತ್ರದ ಭೂಮಾಕೃತಿಯ ನಂತರ ಭಾರತ ಮಾತೆ ಇವನ ತೆರೆದ ಕಂಗಳೆದುರಿನಲ್ಲಿದ್ದಾಳೆ. ಅವಳು ಸಾಮಾನ್ಯಳಲ್ಲ; ಜಗಜ್ಜನನಿ, ಉಜ್ವಲ ತನಯೆ! ಅಂಥವಳ ಬೆಳಕಿನ ಮಗಳ (ಕನ್ನಡ ತಾಯಿಯ) ಮಗನಾಗಿ ಹುಟ್ಟಿರುವದು ತನ್ನ ಸೌಭಾಗ್ಯವೆಂದು ಕಾವ್ಯಾನಂದರು ತಮ್ಮ ಜನನದ ಧನ್ಯತೆಯನ್ನು ಧ್ವನಿಸಿದ್ದಾರೆ.

ಆ ಮಹಾ ತಾಯಿಯ ತನು ಬಿಡುಗಡೆ, ವಿಜ್ಞಾನ ಸಹಿತ ಜ್ಞಾನ ವದನಲ್ಲಿ ಕರುಣೆಯೇ ಕಣ್ಣಾಗಿ, ನನ್ನಿಯೆ ಕಿವಿಯಾದ, ನೀತಿಯೆ ನಾಸಿಕವಾದ, ಅಭಯ ಹಸ್ತವಾಗಿ, ಪ್ರೀತಿ ರಸನೆಯಾಗಿ ಮಸ್ತಕವಂತೂ ಸರ್ವಹಿತವಾಗಿದೆ. ಇಂಥ ತಾಯಿಯ ಶ್ರೀ ಚರಣಗಳು ಚಾರಿತ್ರ್ಯಪೂರ್ಣವಾಗಿದ್ದರೆ, ಅವಳ ಪೀಠ ಸಿಂಹಶಕ್ತಿಯಾಗಿದೆ. ಮಹಿಮಾನ್ವಿತಳಾದ ಇಂಥ ತಾಯಿಯ ಮನೆಯಲ್ಲಿ ಕೂಡ ಅಂತಃಕಲಹದ ಕಿಚ್ಚು ಹೊತ್ತಿಕೊಳ್ಳಬಹುದಾಗಿದೆ. ವೈರತ್ವದ ಬಿರುಗಾಳಿ ಬೀಸಿದರೂ ಅವಳು ಅಂತಃಸತ್ವದಿಂದ ಹಿಮಾಲಯದಂತೆ ನಿಶ್ಚಲಳೂ, ಹಿಂದೂ ಸಾಗರದಂತೆ ಗಂಭೀರಳೂ ಆಗಿದ್ದಾಳೆ. ಇಲ್ಲಿ ವಚನಕಾರರ ದೇಶ ಭಕ್ತಿ, ತಾಯಿನಾಡಿನ ಮೇಲಿಟ್ಟಿರುವ ಅಚಲ ವಿಶ್ವಾಸ, ಕೊನೆಯಿಲ್ಲದ ಭಕ್ತಿ, ಅಪಾರ ಶ್ರದ್ಧೆ ವ್ಯಕ್ತವಾಗಿದೆ. ಆದ್ದರಿಂದ ಅಂಥ ತಾಯಿಗೆ ತಕ್ಕ ಮಗಳಾಗುವಂತೆ ಆ ಸ್ವತಂತ್ರ ಧೀರ ಸಿದ್ಧೇಶ್ವರ ದಯೆಗೈಯಲಿ ಎಂಬುದು ಹೃದಯದ ಹಾರೈಕೆಯಾಗಿ ಅಂತರಂಗದ ಅಭೀಪ್ಸೆ ಒಡಮೂಡಿದೆ.

"ನಿರಂಕುಶ ಮತಿಗಳಾಗಲಿ
ವಿಶ್ವಜಿತುಗಳಾಗಲಿ



ಸರ್ವಹಿತ ವ್ರತಿಗಳಾಗಲಿ
ನಿನ್ನ ಮಕ್ಕಳು
ದಿಗಂತ ವಿಶ್ರಾಂತವಾಗಲಿ

ನಿನ್ನ ಕೀರ್ತಿ, ಯಶಗಳು " ಎಂದು ಮನಸಾರೆ ಹಾರೈಸಿದ್ದಾರೆ.

ರಾಷ್ಟ್ರಾಭಿಮಾನ, ವಚನಕಾರರ ಬದುಕಿನ ಉಸಿರು; ಜೀವನದ ಧ್ಯೇಯ. ಅದನ್ನು ಸಾಧಿಸುವ ಮಂತ್ರಗಳು ಏಳು. ಅವು ಸಪ್ತಾಕ್ಷರಿಯಿಂದ ಏಕಾಕ್ಷರಿಯವರೆಗೆ ಇವೆ. ಮಂತ್ರವಿಲ್ಲದೆ ಕಾರ್ಯಗಳು ಸಿದ್ಧಿಸಲಾರವು. ಮಂತ್ರದ ಮಹಿಮೆ ಅಪಾರ, ಅಗಾಧ, ಅವರ್ಣನೀಯ. ಸಕಲ ಶ್ರೇಯೋಭಿವೃದ್ಧಿಗೂ, ಸಕಲ ಕ್ರಿಯಾಸಿದ್ಧಿಗೂ ಮೂಲ!

" ಮನನಂ ಸರ್ವಪಕ್ಷೇಷು ತ್ರಾಣಂ ಸಂಸಾರ ಸಾಗರಾತ್
ಮನನಾತ್ ತ್ರಾಣನಾಚ್ಚೈವ ಮದ್ರೂಪಸ್ಯಾವಬೋಧನಾತ್
ಮಂತ್ರಮಿತ್ಯುಚ್ಯತೇ ಬ್ರಹ್ಮನ್ ಮದಧಿಷ್ಠಾನ ತೋಪಿವಾ"

ಅವುದನ್ನು ಮನನ ಮಾಡುವದರಿಂದ ಸಂಸಾರ ಸಾಗರದಲ್ಲಿ ನಿಶ್ರಾಣನಾದವನಿಗೆ ತ್ರಾಣವನ್ನೀಯುವದೋ ಅಂದರೆ ಷಡ್ರಿಪು, ಷಡ್ಭ್ರಮ, ಷಡೂರ್ಮಿಗಳಿಂದ ನೊಂದ ಬೆಂದ ಮುಮುಕ್ಷುವನ್ನು ರಕ್ಷಿಸುವದೋ, ಅವುದರಿಂದ ಪರಾತ್ಪರ ಪರಬ್ರಹ್ಮ ಸ್ವರೂಪ ನಿಚ್ಚಳವಾಗಿ ತೋರುವದೋ, ಯಾವುದರಲ್ಲಿ ಪರಬ್ರಹ್ಮದ ಅಧಿಷ್ಠಾನವಾಗಿದೆಯೋ ಅದೇ ಮಂತ್ರ.

" ಸಪ್ತ ಕೋಟಿಷು ಮಂತ್ರೇಷು ಮಂತ್ರಃ ಪಂಚಾಕ್ಷರೋ ಮಹಾನ್" ಎಂದು ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿದ್ದರೆ, ವಚನಕಾರರು—

" 'ಭಾರತ–ಕರ್ನಾಟಕ'
ಇದು ನನ್ನ ಸಪ್ತಾಕ್ಷರೀ ಮಂತ್ರವಯ್ಯ
'ಕನ್ನಡ – ಬಸವ'
ಇದು ನನ್ನ ಷಡಕ್ಷರೀ ಮಂತ್ರವಯ್ಯ
ಸತ್ಯ – ಸೌಂದರ್ಯ
ಇದು ನನ್ನ ಪಂಚಾಕ್ಷರೀ ಮಂತ್ರವಯ್ಯ
ಪ್ರೀತಿ – ನೀತಿ
ಇದು ನನ್ನ ಚತುರಕ್ಷರೀ ಮಂತ್ರವಯ್ಯ
ಜನತೆ

ಇದು ನನ್ನ ತ್ರ್ಯಕ್ಷರಿ ಮಂತ್ರವಯ್ಯ
ಕಾವ್ಯ
ಇದು ನನ್ನ ದ್ವ್ಯಕ್ಷರಿ ಮಂತ್ರವಯ್ಯ
‘ನೀ’
ಇದು ನನ್ನ ಏಕಾಕ್ಷರಿ ಮಂತ್ರವಯ್ಯ ”

ಎಂಬ ಮಂತ್ರ ಕಾವ್ಯಾನಂದರ ಅಮೃತ ಜೀವನದ ಸೂತ್ರವಾಗಿದೆ. ನಿತ್ಯ ಬದುಕಿಗೆ ಹಾಸುಹೊಕ್ಕಾದ ಈ ಮಂತ್ರ ಅವರನ್ನು ಮಂತ್ರ ದೃಷ್ಟಾರರನ್ನಾಗಿ ಮಾಡಿದೆ. ಷಡಕ್ಷರಿ ಮಂತ್ರದ ಸರ್ವಶಕ್ತಿಯನ್ನು ‘ಓಂ’ ಕಾರದಲ್ಲಿ ಕಾಣುವಂತೆ ; ವಚನೋದ್ಯಾನದ ಸಪ್ತಾಕ್ಷರಿ ಮಂತ್ರದ ಸರ್ವಶಕ್ತಿಯು ,ನೀ’ ದಲ್ಲಿ ಅಂದರೆ ಅಹಂಕಾರ ನಿರಸನದಲ್ಲಿ ಕಾಣುವದು. ಷಡಕ್ಷರಿ ಮಂತ್ರಗಳ ಕೊನೆಯಲ್ಲಿ ಬರುವ ಏಕಾಕ್ಷರಿ ಮಂತ್ರವಾದ “ನೀ” ಎಂಬಲ್ಲಿ ಲಯಗೊಂಡು ಒಂದಾಗಿವೆ. ನಿರಹಂಕಾರ ದ್ಯೋತಕವಾದ ಓಂ ಕಾರದಲ್ಲಿ ಎಲ್ಲವೂ ಒಳಗೊಂಡಂತೆ.

“ಈ ವಚನಗಳು ಷಟ್‌ಸ್ಥಲ ವಚನಗಳಲ್ಲ, ಸಪ್ತಮುಖ ವಚನಗಳು. ಈ ಮುಖಗಳು ಸಪ್ತಾಕ್ಷರಿಯಿಂದ ಏಕಾಕ್ಷರಿಯ ವರೆಗೆ ಕಾಣಿಸಿಕೊಳ್ಳುತ್ತವೆ. ಭಾರತ–ಕರ್ನಾಟಕ, ಕನ್ನಡ–ಬಸವ, ಸತ್ಯ–ಸೌಂದರ್ಯ, ಪ್ರೀತಿ–ನೀತಿ, ಜನತೆ, ಕಾವ್ಯ, ಮತ್ತು ‘ನೀ’ — ಎಂಬಿನೇ ಆ ಮಂತ್ರಗಳು. ವಚನೋದ್ಯಾನದ ವಚನಗಳೆಲ್ಲ ಈ ಮಂತ್ರಗಳಿಗೆ ಬರೆದ ಮಾನವೀಯ ವ್ಯಾಖ್ಯಾನವಾಗಿವೆ .... ” ಎಂಬ ಡಾ|| ಹಾ. ಮಾ. ನಾಯಕರ ಮಾತುಗಳು ಮನನೀಯವಾಗಿವೆ.

ತನ್ನನ್ನು ತಾನು ಮೊದಲು ಅರಿಯಬೇಕು. To know thyself. ಇದು ಅರುವಿನ ಮೂಲ, ಬದುಕಿನ ಸೆಲೆ. ತನ್ನನ್ನು ತಾನು ಅರಿಯದವನು ಆ ‘ಶಿವ’ನನ್ನೇನು ಅರಿತಾನು ? ಆದ್ದರಿಂದ ಆ ಸ್ವತಂತ್ರಧೀರ ಸಿದ್ಧೇಶ್ವರನನ್ನು ಅತ್ಯಂತ ಆರ್ತಭಾವದಿಂದ

“ಕರುಣಿಸು ಕರುಣೆಗರಸ ಕರುಣಿಸು
ನನ್ನನರಿದು ನನ್ನರಿವಿನಿಂದ ನಿನ್ನನರಿದು
ನಿನ್ನಿಂದ ಎಲ್ಲವನ್ನೂ ಅರಿದು
ಅರಿವಾಗಿ ಅರಿವ ಬೆರೆದು
ಬಯಲಾಗುವದನ್ನು ಕರುಣಿಸು”

ಎಂದು ಮೊರೆಯಿಟ್ಟಿದ್ದಾರೆ. ಸರಳತೆ, ಸಹಜತೆ, ಸುಭಗತೆಗಳು ಇಲ್ಲಿ ಒಡಮೂಡಿ



ಬಂದಿರುವದನ್ನು ಕಾಣಬಹುದು. ಅಧ್ಯಾತ್ಮದ ಜಟಿಲತೆಯನ್ನು ಲೌಕಿಕವಾಗಿ ಅತ್ಯಂತ ಸರಳ ರೀತಿಯಲ್ಲಿ ನಿರೂಪಿಸಿದ ಇಲ್ಲಿಯ ನಿರೂಪಣೆ ನಿಜಕ್ಕೂ ಶ್ಲಾಘನೀಯ.

ಸಮಾಜ ಜೀವನದ ಪ್ರತಿಬಿಂಬ. ಅದು ಅಂದಂದಿನ ಸಾಹಿತ್ಯದಲ್ಲಿ ಪ್ರತಿಫಲಿಸುತ್ತದೆ. ಆಯಾ ಕಾಲದ ಬದುಕಿನ ಯಥಾವತ್ತಾದ ಚಿತ್ರವನ್ನು ಕೊಡುತ್ತದೆ. “ಸಮಾಜ ದರ್ಶನ ವಚನ ಸಾಹಿತ್ಯದ ಮೂಲಭೂತವೂ ಪ್ರಪ್ರಮುಖವೂ ಆದ ಲಕ್ಷಣ. ಲೋಕದ ಅಂಕು-ಡೊಂಕುಗಳನ್ನು ಹಾಗೂ ರೂಪ-ರೇಷೆಗಳನ್ನು ಗುರುತಿಸುವ ಮೂಲಕ ಬದುಕಿನ ವಾಸ್ತವ ಚಿತ್ರವನ್ನು ಪ್ರತಿಬಿಂಬಿಸುವದೇ ಆ ಸಾಹಿತ್ಯದ ಉದ್ದೇಶಗಳಲ್ಲೊಂದು” ಜೀವನವನ್ನು ಯಥಾವತ್ತಾಗಿ ಚಿತ್ರಿಸಿ ವಾಸ್ತವತೆಯನ್ನು ಪ್ರಾಮಾಣಿಕವಾಗಿ ಪ್ರತಿಬಿಂಬಿಸಿ ಮೌಲ್ಯಗಳಿಗೆ ಒತ್ತು ಕೊಟ್ಟು ಸಮಾಜ ಹಾಗೂ ವ್ಯಕ್ತಿಯ ಉದ್ಧಾರಕ್ಕೆ ಸಾಧನವಾಗುವ ಸಾಹಿತ್ಯವೇ ಶ್ರೇಷ್ಠ ಸಾಹಿತ್ಯವೆಂದು ಪರಿಗಣಿಸಲ್ಪಡುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಹನ್ನೆರಡನೆಯ ಶತಮಾನದ ಶರಣರು ಅಂದಿನ ಸಮಾಜದ ಚಿತ್ರವನ್ನು ವಚನಗಳಲ್ಲಿ ನಿರೂಪಿಸಿದಂತೆ ಆಧುನಿಕ ವಚನಕಾರರೂ ಕೂಡ ಕಾಲ ಪ್ರಜ್ಞೆಗೆ ಸ್ಪಂದಿಸಿರುವದನ್ನು ಕಾಣಬಹುದು. ಈ ದಿಸೆಯಲ್ಲಿ ‘ವಚನೋದ್ಯಾನ’ ದಲ್ಲಿ ವಿಹಾರ ಕೈಕೊಂಡಾಗ ಇಲ್ಲಿರಳಿದ ವಚನಗಳೂ ಸಮಕಾಲೀನ ಸಮಾಜ ಜೀವನವನ್ನು ರೂಪಿಸುವಲ್ಲಿ, ಅದರ ಲೋಪ–ದೋಷಗಳನ್ನು ಗುರುತಿಸುವಲ್ಲಿ ಸಾಕಷ್ಟು ಸಮರ್ಥವಾಗಿವೆ” ಎಂಬುದನ್ನು ಅರಿಯಬಹುದು.

ಡಾ|| ಸಿದ್ಧಯ್ಯ ಪುರಾಣಿಕರು ತಮ್ಮ ಸರಕಾರಿ ವೃತ್ತಿಯ ಮೂಲಕ ಕರ್ನಾಟಕದ (ಹಿಂದಿನ ಹೈದರಾಬಾದ ಸಂಸ್ಥಾನ ಸಹಿತ) ಎಲ್ಲ ಭಾಗಗಳನ್ನೂ ಪ್ರತ್ಯಕ್ಷ ಕಂಡು ಅಲ್ಲಲ್ಲಿ ಸೇವೆ ಸಲ್ಲಿಸಿದ್ದರಿಂದ ಜನ ಸಂಪರ್ಕ ಸಾಕಷ್ಟು ಉಂಟಾಗಿ ತಮ್ಮ ಸುತ್ತಮುತ್ತಲಿನ ಸಮಾಜವನ್ನು ‘ತೆರೆದ ಕಣ್ಣು’ಗಳಿಂದ ನೋಡಿದ್ದಾರೆ. ದೀನ ದಲಿತರನ್ನು ಕಂಡು ಅವರ ಬದುಕಿನ ರೀತಿಯನ್ನು ನೋಡಿ. ಅನುಕಂಪಿತರಾಗಿದ್ದಂತೆ, ಸುಖದ ಸುಪ್ಪತ್ತಿಗೆಯ ಮೇಲೆ ಬಡವರನ್ನು ಶೋಷಿಸುವ ಶ್ರೀಮಂತ ವರ್ಗವನ್ನು ಕಂಡಿದ್ದಾರೆ. ಅಂಥವರ ಬಗ್ಗೆ ಕ್ರೋಧವನ್ನೇ ತಳೆದಿದ್ದಾರೆ. ಹಲವರಿಗೆ ತಮ್ಮ ಹಸಿವೆಯನ್ನು ಹಿಂಗಿಸಿಕೊಳ್ಳಲು ತುತ್ತು ಕೂಳಿಲ್ಲ, ಆದರೆ ಕೆಲವರು ತಿಂದು–ತೇಗಿ ಸಾಕಷ್ಟು ಚೆಲ್ಲಿ ಅಜೀರ್ಣತೆಗೆ ತುತ್ತಾಗುತ್ತಾರೆ. ಒಂದೆಡೆ ಕಡು ಬಡತನದ ಚಿತ್ರ, ಇನ್ನೊಂದೆಡೆ ಶ್ರೀಮಂತಿಕೆಯ ಅಟ್ಟಹಾಸದ ನರ್ತನ. ಸಮಾಜದಲ್ಲಿ ನಾವು ಕಾಣುವದನ್ನೆ ವಚನಕಾರರು ಕಂಡು ಅವರ ಹೃದಯ ಮಿಡಿದಿರುವದನ್ನು ಕೆಳಗಿನ ವಚನದಲ್ಲಿ ಕಾಣಬಹುದು.

“ಉಂಡುದಕ್ಕಿಂತ ಉಳಿಸಿದ ಎಂಜಲು ಹೆಚ್ಚು
ಉಳ್ಳ ಕೆಲವರ ಬೆಳ್ಳಿ ತಟ್ಟೆಗಳಲ್ಲಿ!
ಬಳಿದು ತಂದ ಎಂಜಲವೇ ಪರಮ ಪ್ರಸಾದ

ಅಸಂಖ್ಯ ಅಭಾಗಿಗಳ ಮಣ್ಣ ಮಿಟ್ಟೆಗಳಲ್ಲಿ!
ಏನ ಕೊಂದರೆ ಹಸಿವೆಯಾದೀತೆಂಬ ಹಳವಂಡ ಕೆಲವರಿಗೆ,
'ಏನ ತಿನ್ನಲಿ ಹಸಿವೆ ಹಿಂಗಿಸಲು ? ಎಂಬ ಚಿಂತೆ ಬಹು ಜನರಿಗೆ!
ಅಜೀರ್ಣವಾಗಿ ಆಸ್ಪತ್ರೆಗೆ ಹೋಗುವವರು ಕೆಲವರು,
ಹಸಿವೆಯಿಂದ ಕುಸಿದು ಆಸ್ಪತ್ರೆ ಸೇರುವವರು ಬಹುಜನರು !
'ಹಸಿವೆಯೇ ಇಲ್ಲ' ವೆನ್ನುವವರಿಗೆ ಮೈಮುರಿದು ದುಡಿಯಲು ಕಲಿಸಿ
'ಹಸಿವೆಯೇ ಹಿಂಗ' ದೆನ್ನುವವರಿಗೆ ಅಶನವನ್ನು ನೀಡಾ.
ಸ್ವತಂತ್ರಧೀರ ಸಿದ್ಧೇಶ್ವರಾ ! "

ವಾಸ್ತವಿಕ ಬದುಕಿನ ನಗ್ನ ಚಿತ್ರಣಕ್ಕೊಂದು ಉತ್ಕೃಷ್ಟ ಮಾದರಿ ಮೇಲಿನ ವಚನ.

"ಹೋಮರನಂಥ ವಿಶ್ವಕವಿಗಳು ಭಿಕ್ಷೆ ಬೇಡಬೇಕು.
ಹೆಂಡ ಮಾರುವವರು ಲಕ್ಷಾಧೀಶರಾಗಬೇಕು –
.... .... .... .... .... .... .... ....
ದುಡಿದವರಿಗೆ ದುಗ್ಗಾಣಿ, ದುಡಿಸಿಕೊಳ್ವರಿಗೆ ಅಷ್ಟೈಶ್ವರ್ಯ
.... .... .... .... .... .... .... ....
ಮಾನವೋದ್ಧಾರಕರಿಗೆ ವಿಷದ ಬಟ್ಟಲು, ಗುಂಡು,
ಮಾನವೋತ್ಪೀಡಕರಿಗೆ ಸುಖ ಸಂಪದ
.... .... .... .... .... .... .... ....

ಸಾಮಾಜಿಕ ಅಸಮಾನತೆಯನ್ನು ಕಂಡ ಕವಿಯಲ್ಲಿ 'ಸರ್ವರಿಗೂ ಸಮಾನಾವಕಾಶದ ಗುರಿ ಸರ್ವೋದ್ಧಾರ, ಸರ್ವಜನ ಸುಖದ ಗುರಿ' ಮುಟ್ಟಬೇಕೆಂಬ ಹಂಬಲ ತೀವ್ರವಾಗಿದೆ.

ರೈತನ ಶೋಷಣೆ ಎಂದಿನಿಂದಲೂ ನಡೆದು ಬಂದದ್ದೆ. ಹಗಲಿರುಳು ಬೆವರು ಸುರಿಸಿ, ಮಳೆ–ಬಿಸಿಲೆನ್ನದೆ, ಚಳಿ–ಗಾಳಿಯೆನ್ನದೆ ಭೂಮಿತಾಯಿಯ ಮಗನಾಗಿ ದುಡಿಯುತ್ತ ಬಂದ ರೈತನಿಗೆ ಹೊಟ್ಟೆಗೆ ಹಿಟ್ಟಿಲ್ಲ, ಮೈಗೆ ಬಟ್ಟೆಯಿಲ್ಲ. ದುಡಿಯುವ ಕೈಗಳನ್ನು ಕಟ್ಟಿ ಹಾಕುವ ಸಿರಿವಂತರು ರೈತನ ಬೆವರಿನ ಮೇಲೆ ತಮ್ಮ ಸೌಧಗಳನ್ನು ನಿರ್ಮಿಸಿಕೊಂಡು ಮೆರೆಯುತ್ತಿದ್ದಾರೆ. ಆ ಬಡರೈತ ಬೆಳೆದ ಬೆಳೆಯನ್ನು ಮಾರಿ ತಮ್ಮ ಬೊಕ್ಕಸಗಳಲ್ಲಿ ಕೊಳ್ಳೆ ಹಾಕಿದರು. ಹಿಂದಿನ ರಾಜ–ಮಹಾರಾಜರ ಕಾಲದ ಪರಿಸ್ಥಿತಿಗೂ ಇಂದಿನ ಪ್ರಜಾಪ್ರಭುತ್ವದಲ್ಲಿ ಕೂಡ ರೈತನ ಸ್ಥಿತಿಗೂ ಯಾವ ಅಂತರವೂ ಇಲ್ಲ. ಆಳರಸರು ರೈತನ ರಕ್ತವನ್ನು ಹೀರಿದ ಜಿಗಣೆಗಳಾದರು. ರಾಜ–ಮಹಾರಾಜರು ಅಳಿದು ಹೋಗಿ ಪ್ರಜೆಗಳ ಪ್ರಭುತ್ವ ಬಂದಾಗಲೂ ರೈತನ ಸ್ಥಿತಿಯಲ್ಲಿ ಯಾವ ಅಂತರವೂ ಕಾಣಲಿಲ್ಲ.



ನ್ಯಾಯ ದೊರೆಯುವದಂತೂ ಕನಸಿನ ಮಾತೇ ಸರಿ ! ಇದಕ್ಕೆಲ್ಲ ಮುಖ್ಯ ಕಾರಣ ಭ್ರಷ್ಟಾಚಾರದ ತಾಂಡವ ನೃತ್ಯ, ಲಂಚದ ಪಂಚಾಮೃತ, ಸ್ವಾರ್ಥಿಗಳ ಸ್ವಹಿತಾಸಕ್ತಿ, ಪಟ್ಟಭದ್ರರ ಕೈವಾಡ ಇವುಗಳಿಗೆ ಸರಕಾರವು ಸಹ ಹೊರತಾಗಿಲ್ಲ.

"ಭ್ರಷ್ಟಾಚಾರವೇ ಶಿಷ್ಟಾಚಾರದ ವೇಷ ತೊಟ್ಟಿದೆ ;
ಶೀಲ ಶೂನ್ಯತೆಯೇ ಸಭ್ಯತೆಯ ಉಡುಪು ತೊಟ್ಟಿದೆ ;
ಶೋಷಣೆಯೇ ಸಾಮ್ಯವಾದದ ಸೋಗು ಹಾಕಿದೆ ;
ಮೋಸವೇ ಲೇಸಿನ ಆಭಾಸ ಹುಟ್ಟಿಸಿದೆ ;
ಸಟೆಯೇ ದಿಟದ ಲಾಂಛನ ಧರಿಸಿದೆ .... "

ಆದ್ದರಿಂದಲೇ ಕೆಲವರು ಒಡೆಯರಾಗಿ, ಬಹುಜನರು ಬಡವರಾಗಿದ್ದಾರೆ. 'ಬಹು ಜನ ಹಿತಾಯ, ಬಹು ಜನ ಸುಖಾಯ' ಎಂಬುದು ಕನಸಾಗಿದೆ.

ಹೆತ್ತ ತಾಯಿಯೇ ತನ್ನ ಮಗುವಿನ ಕತ್ತು ಹಿಚುಕಿದರೆ, ಬೇಲಿ ತಾನು ಕಾಯಬೇಕಾದ ಹೊಲವನ್ನೇ ಮೇಯ್ದರೆ ಆಗಬಾರದ್ದು ಆಗಿಹೋಗುತ್ತದೆ. ಜನತೆಯನ್ನು ರಕ್ಷಿಸಬೇಕಾದ ಸರಕಾರವೇ ಇಂದು ದರೋಡೆಕೋರರಂತೆ ವರ್ತಿಸುತ್ತಿರುವದು ಅತ್ಯಂತ ವಿಷಾದದ ಸಂಗತಿ ಅಷ್ಟೇ ಅಲ್ಲ ಅವಹೇಳನಕಾರಕವೂ ಹೌದು.

"ಸರಕಾರ ದರೋಡೆಕೋರನಾದಾಗ
ನೌಕರರು ನರಭಕ್ಷಕರಾಗದಿರುವರೇನಯ್ಯ ?
ಸಚಿವರೇ ಸುಲಿಗೆಗಾರರಾದಾಗ
ಆಪ್ತ ಸಹಾಯಕರು ಡಕಾಯಿತರಾಗರೇನಯ್ಯ ?
ಪೋಷಕರೇ ಶೋಷಕರಾದಾಗ
ಆಶ್ರಿತರು ಜೀವನ್ಮೃತರಾಗರೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ
ಸಮಾಜವೇ ಸಮಜವಾದಾಗ
ವ್ಯಕ್ತಿ ಪಶುವಾದರೆ ಆಶ್ಚರ್ಯವೇನಯ್ಯ !

ಬಡ ಭಾರತೀಯನ ಶೋಷಣೆ ಒಂದು ಮುಖದಿಂದಲ್ಲ ಹತ್ತಾರು ಮುಖದಿಂದ ನಡೆಯುತ್ತಿದೆ. ವ್ಯಾಪಾರಿಗಳು, ಉದ್ಯಮಿಗಳು, ಮಾಲೀಕರು, ವಿದ್ಯಾವಂತರೆನಿಸಿಕೊಂಡವರು, ಪುರೋಹಿತರು, ಸ್ವಾಮಿಗಳು, ಪೂಜಾರಿಗಳು, ಒಬ್ಬರೇ, ಇಬ್ಬರೇ .... ಎಲ್ಲರೂ ಬಡವನ ರಕ್ತ ಹೀರಲು ಸಿದ್ಧರಾಗಿ ನಿಂತವರೇ! ಬಡತನ, ಅಜ್ಞಾನ, ಮೂಢ

ನಂಬಿಕೆಗಳ ಮೂರ್ತಿಮತ್ತಾದ ಬಡ ಭಾರತದ ಬಡ ಪ್ರಜೆಯ ಸ್ಥಿತಿ ಕಟುಕನ ಕೈಗೆ ಸಿಕ್ಕ ಕುರಿಯಂತಾಗಿದೆ.

"ಸಾಯುವವರಿಗೆ ಶಾಸ್ತ್ರ ಹೇಳಿದರೇನು ?
ಸುಳ್ಳು ಹೇಳುವದು ಬಿಡಲಿಲ್ಲ ಶಾಸ್ತ್ರಿಗಳ ಬಾಯಿ
ಸಾಯುವ ವರೆಗೆ ಪೂಜೆ ಮಾಡಿದರೇನು ?
ಭಕ್ತರ ಬೋಳಿಸುವದು ಬಿಡಲಿಲ್ಲ ಪೂಜಾರಿಯ ಕೈ "

ಇಂಥ ಶೋಷಣೆಯನ್ನು ಕಂಡೇ ಮಹಾತ್ಮಾ ಬಸವಣ್ಣನವರು ಸಾಮಾಜಿಕ ಕ್ರಾಂತಿಗೆ ಉದ್ಯುಕ್ತರಾದರು. ದೇವಾಲಯಗಳು ಶೋಷಣೆಯ ಕೇಂದ್ರಗಳು, ಪೂಜಾರಿಗಳು ಶೋಷಕರು, ದೇವರು ಹಾಗೂ ಧರ್ಮ ಈ ಶೋಷಣೆಯ ಮೂಲಬಿಂದು. ಈ ಶೋಷಣೆಯ ಅಸ್ತಿವಾರವನ್ನೇ ತಮ್ಮ ವೈಚಾರಿಕ ಪ್ರಜ್ಞೆಯ ಮೂಲಕ ಅಗೆದು ಹಾಕಿ ಕ್ರಾಂತಿ ಪುರುಷರಾದರು ಶಿವಶರಣರು. ದೇವರು ದೇವಾಲಯದಲ್ಲಿಲ್ಲ. ಮಠಮಾನ್ಯಗಳು ಕೇವಲ ಸ್ವಾಮಿಗಳ ಸೊತ್ತಲ್ಲ. ದೇಹವೇ ದೇವಾಲಯವಾಗಬೇಕು. ಪ್ರಾಣವೇ ದೇವರಾಗಬೇಕು, ಜೀವನವೇ ಪೂಜೆಯಾಗಬೇಕು ಮಠಮಾನ್ಯಗಳ ಮಠಾಧೀಶರು ಟ್ರಸ್ಟಿಗಳು ಮಾತ್ರ. ಸಮಾಜದ ದುಡ್ಡಿನಿಂದ ಬೆಳೆದುದನ್ನು ಸಮಾಜ ಜಂಗಮನ ಸೇವೆಗೆ ಸಲ್ಲಬೇಕು. ಸಕಲರಿಗೆ ಲೇಸನ್ನೇ ಬಯಸುವ ವರ್ಗರಹಿತ, ವರ್ಣರಹಿತ ನೆಲಗಟ್ಟಿನ ಮೇಲೆ ನವೀನ ಸಮಾಜ ಕಟ್ಟಲು ಹೋರಾಡಿದರು. ಆದರೆ ಆ ಪ್ರಜ್ಞೆ ಅಲ್ಪ ಕಾಲ ವಿಜೃಂಭಿಸಿ, ಮರೆಯಾಗಿ ಮತ್ತೆ ಮೊದಲಿನ ಸ್ಥಿತಿಯೇ ಬಂತು. ಈಗಲೂ ಸಹ ಹಿಂದಿನದೆ ಮುಂದುವರೆದಿದೆ.

ಪಾಪ, ಅನ್ಯಾಯ, ಮೋಸ, ವಂಚನೆ, ಭ್ರಷ್ಟತೆ, ನಾನಾ ವಾಮ ಮಾರ್ಗಗಳಿಂದ (ಬೆವರು ಸುರಿಸದೆ) ಗಳಿಸಿದ ಹಣವನ್ನು 'ದಾನ'ವಾಗಿ ಕೊಟ್ಟು 'ಪುಣ್ಯ' ಪಡೆದುಕೊಳ್ಳುವ ಪಾಪಿಷ್ಠ ಧನವಂತರಿಂದಲೇ ಈ ಲೋಕ ತುಂಬಿ ಹೋಗಿದೆ. 'ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ' ಎಂದು ಅಣ್ಣನವರು ನುಡಿದಿದ್ದರೂ ಇಂದು ಪುಣ್ಯದಾಗರಗಳೆನಿಸಿಕೊಂಡ ಗುಡಿ-ಗೋಪುರ-ಧರ್ಮಸಾಲೆ-ಅನ್ನ ಛತ್ರ ಮುಂತಾದವುಗಳ ನಿರ್ಮಾಣ ಇಂಥ ಹಣದ ಮೇಲೆಯೇ ನಿಂತಿರುವದನ್ನು ಎಲ್ಲರೂ ಬಲ್ಲರು. ಇಂಥ ಘಟನೆಗಳನ್ನು ಪ್ರತ್ಯಕ್ಷ ಕಂಡ ವಚನಕಾರರು,

"ಲಂಚದ ಹಣದಿಂದ ಪಂಚಾಮೃತವ ತರುವರಾರೋ,
ಕಾಳ ಸಂತೆಯ ಹಣದಿಂದ ಪಲ್ಲಕ್ಕಿ ಕೊಡಿಸುವರಾರೋ,
ಖೊಟ್ಟಿ ಪರ್ಮಿಟ್ಟಿನ ಹಣದಿಂದ ಗೋಪುರ ಕಟ್ಟಿಸುವರಾರೋ,
ಕಂಟ್ರೋಲಿನ ಕಾಂಚಾಣದಿಂದ ಕಳಸ ವಿಡಿಸುವರಾರೋ,



ಕಲಬೆರಕಿಯ ಸಂಪಾದನೆಯಿಂದ ಪ್ರಸಾದ ಹಂಚುವರಾರೋ,
ಮೋಸದ ಧನದಿಂದ ಧರ್ಮಶಾಲೆ ಕಟ್ಟಿಸುವರಾರೋ,
ಈ ಕದ್ದುಣ್ಣುವ ಕದೀಮರ ಕಳ್ಳ ಭಕ್ತಿಯ ಕಂಡು
ಕದ್ದು ನಗುತ್ತಿರುವಿಯೇನಯ್ಯಾ ?
ನಕ್ಕರೆ ಸಾಲದು, ಇಕ್ಕಯ್ಯಾ ಅವರನ್ನು ಇಕ್ಕುಳದೊಳಗೆ"

ಎಂದು ರೋಸಿಗೊಂಡು ಶಿಕ್ಷಿಸುವಂತೆ ಬೇಡಿಕೊಳ್ಳುತ್ತಾರೆ. ಈ ನುಡಿಗಳ ಯಥಾರ್ಥತೆಯಲ್ಲಿ ವ್ಯಂಗ್ಯ ಮೊನಚಾಗಿದೆ, ವಿಡಂಬನೆ ವಿಜೃಂಭಿಸಿದೆ.

ಹಲವಾರು ಆದಾಯ ತರುವ (ತನ್ನಿಂದ ತಾನೆ ಬರುವ) ಇಲಾಖೆಗಳಲ್ಲಿ ಕಾರ್ಯ ಮಾಡಿದ ವಚನಕಾರರು ಲಂಚ, ಭ್ರಷ್ಟಾಚಾರ, ಸ್ವಜನ ಪಕ್ಷಪಾತದಿಂದ ಹಿಡಿದು ನಿಂತವರು. ಕರ್ತವ್ಯದ ಕುರ್ಚಿಯ ಮೇಲೆ ಮಂಡಿಸಿದ್ದರೂ, ಅದನ್ನು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಂಡವರಲ್ಲ. ಲಂಚದ ಮಂಚದ ಮೇಲೆ ಪವಡಿಸುವ, ಭ್ರಷ್ಟಾಚಾರದ ಬಾಗಿಲನ್ನೂ ಸದಾ ತೆರದಿಟ್ಟು, ಆತ್ಮಗೌರವವನ್ನು ಮಾರಿಕೊಂಡು, ಎಂಜಲಕ್ಕೆ ಕೈ ಒಡ್ಡಿ, ಸದಾ ಹಲ್ಲನ್ನು ಗಿಂಜಿ ಕೈ ಹೊಸೆಯುತ್ತಿರುವ ಅಧಿಕಾರಿಗಳನ್ನು ಎಲ್ಲೆಡೆಯಲ್ಲಿ ಕಾಣುತ್ತಿರುವಾಗ ಕಾವ್ಯಾನಂದರಂಥ ನಿಸ್ಪೃಹ, ನ್ಯಾಯ ನಿಷ್ಠುರ ದಾಕ್ಷಿಣ್ಯಪರರಲ್ಲದ ಅಧಿಕಾರಿಗಳು ಒಬ್ಬರೋ, ಇಬ್ಬರೋ, ನಮ್ಮ ಮಧ್ಯದಲ್ಲಿರುವದು ನಿಜವಾಗಿಯೂ ಸಂತಸದ, ಸಮಾಧಾನದ ಸಂಗತಿ.

"ಸಮಾಜ ಹಸನಾಗಬೇಕು. ದೇಶ ದೊಡ್ಡದಾಗಬೇಕು. ವ್ಯಕ್ತಿ ನೀತಿವಂತನಾಗಬೇಕು. ಶ್ರೀಮಂತ-ದರಿದ್ರರ ತಾರತಮ್ಯ ತೊಲಗಬೇಕು. ನಾಡಿನಲ್ಲಿ ಸತ್ಯ ಶಾಂತಿಗಳು ಸ್ಥಾಪನೆಯಾಗಬೇಕು ಎಂಬ ಹಂಬಲದಿಂದ ಅವರ ಲೇಖನಿ ಸಿಡಿಲಾಗಿದೆಯೆ ಹೊರತು ಅಸೂಯೆ, ದುಷ್ಟ ಬುದ್ಧಿಯಿಂದಲ್ಲ." ಎಂಬ ದೇ. ಜವರೇಗೌಡರ ಮಾತುಗಳು ವಚನಕಾರರ ಪರಿಶುದ್ಧ ಬದುಕಿಗೆ, ಅವರು ಬಾಳಿದ ರೀತಿಗೆ ಹಿಡಿದ ರನ್ನಗನ್ನಡಿ.

ವಚನೋದ್ಯಾನದ ವಚನಗಳೆಲ್ಲ ಲೋಕಾನುಭವದಿಂದ ಪರಿಪುಷ್ಟವಾದವುಗಳು. ತೆರೆದ ಕಣ್ಣಿನಿಂದ ಲೋಕವನ್ನು ಕಂಡಾಗ ತೋರಿ ಬಂದ ಲೋಪ-ದೋಷಗಳಿಗೆ ಮನ ಹಿಡಿದುಕೊಳ್ಳುತ್ತದೆ. ಹೃದಯ ಬಡಿದುಕೊಳ್ಳುತ್ತದೆ. ಪ್ರಚಲಿತ ಪದ್ಧತಿ ಹಾಗೂ ಪರಿಸ್ಥಿತಿಯ ಅವಲೋಕನ, ಅದರಿಂದುಂಟಾದ ಅನುಕಂಪದಿಂದ ಅಸಮಾಧಾನ, ವಿಡಂಬನೆ, ಹಾಸ್ಯ, ಕಟೋಕ್ತಿಗಳು ಅರಿವಿಲ್ಲದೆ ನುಗ್ಗಿ ಬರುತ್ತವೆ. ಮಾನವನಾಗಿ ಹುಟ್ಟಿ ಬಂದ ಮೇಲೆ ಕೆಲವನ್ನು ಪಡೆದುಕೊಂಡಂತೆ ಹಲವನ್ನು ಕಳೆದುಕೊಳ್ಳುತ್ತಾನೆ. ಲೌಕಿಕ ಲಾಭದ ದೆಸೆಯಿಂದ ಆಧ್ಯಾತ್ಮಿಕ ನಷ್ಟವನ್ನು ಅನುಭವಿಸುತ್ತಾನೆ.

ಬದುಕಿನಲ್ಲಿ ನಯ-ವಿನಯ, ಶ್ರದ್ಧೆ-ನಂಬುಗೆ, ಸೇವೆ, ವಿವೇಚನೆ, ಸಾಮರಸ್ಯ, ಪ್ರೀತಿ ಮೊದಲಾದ ಗುಣಗಳನ್ನು ಕಳೆದು ಕೊಂಡರೆ ಆತ್ಮವನ್ನು ಕಳೆದುಕೊಂಡಂತೆಯೇ. ಇಂಥ ಗುಣಗಳು ಬಾಳಿಗೆ ತಂಪನ್ನೀಯ ಬಲ್ಲವು, ಬೆಳಕನ್ನು ಬೀರಬಲ್ಲವು. ಇವುಗಳಿಲ್ಲದ ಬದುಕು ಬದುಕೇ ಅಲ್ಲ. ಬದುಕಿದ್ದರೂ ಸತ್ತಂತೆ- ವಿದ್ಯೆಯೊಂದಿಗೆ ವಿನಯ, ಬುದ್ಧಿಯೊಂದಿಗೆ ಶ್ರದ್ಧೆ, ಶ್ರದ್ಧೆಯೊಂದಿಗೆ ವಿವೇಚನೆ, ವಿವೇಚನೆಯೊಡನೆ ಸಮೃದ್ಧಿ. ಸಮೃದ್ಧಿಯಿಂದ ಸಂಸ್ಕೃತಿ. ಜಾತಿಯೊಡನೆ ಪ್ರೀತಿ, ಸ್ವಾತಂತ್ರ್ಯದೊಂದಿಗೆ ಸೌಜನ್ಯ ಬಂದಾಗಲೇ ನಮ್ಮ ಪ್ರಜಾರಾಜ್ಯವು ರಾಮರಾಜ್ಯವಾಗಬಲ್ಲುದೆಂದು ಭವಿಷ್ಯ ನುಡಿದಿದ್ದಾರೆ. ಆದರೆ ಈಗೇನಾಗಿದೆ ಗೊತ್ತೆ ?

"ವಿದ್ಯೆ ಬಂತು, ವಿನಯ ಹೋಯ್ತು
ಬುದ್ಧಿ ಬಂತು, ಶ್ರದ್ಧೆ ಹೋಯ್ತು
ಶ್ರದ್ಧೆ ಬಂತು, ವಿವೇಚನೆ ಹೋಯ್ತು
ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು
ವಿಜ್ಞಾನ ಬಂತು, ಸಮಾಧಾನ ಹೋಯ್ತು
ಶರೀರ ಸ್ವಾಸ್ಥ್ಯ ಬಂತು, ಚಿತ್ತ ಸ್ವಾಸ್ಥ್ಯ ಹೋಯ್ತು,
ದೀರ್ಘಾಯುಷ್ಯ ಬಂತು, ಜೀವನ ಸ್ವಾರಸ್ಯ ಹೋಯ್ತು,
ಬೋಧನೆ ಬಂತು, ಸಾಧನೆ ಹೋಯ್ತು
ಮಾತು ಬಂತು, ಕೃತಿಯು ಹೋಯ್ತು
ಜಾತಿ ಬಂತು, ಪ್ರೀತಿ ಹೋಯ್ತು
ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು
ಸಿದ್ಧಯ್ಯ ಪುರಾಣಿಕ ಬಂದ
ಸ್ವತಂತ್ರಧೀರ ಸಿದ್ಧೇಶ್ವರ ಹೋದ "

ಇಲ್ಲಿ ಸಿದ್ಧಯ್ಯ ಪುರಾಣಿಕರು ವ್ಯಷ್ಟಿ ಸ್ವರೂಪದಲ್ಲಿದ್ದರೆ ಸ್ವತಂತ್ರಧೀರ ಸಿದ್ಧೇಶ್ವರ ಸಮಷ್ಟಿರೂಪದಲ್ಲಿ ಕಂಗೊಳಿಸಿದ್ದಾನೆ. ಆತನು ಹೋದ ಮೇಲೆ ಈ ತನುವಿಗೆ ಏನು ಬಂದರೇನು ಪ್ರಯೋಜನ ? ಕಳೆದುಕೊಂಡು ಮೌಲ್ಯಗಳನ್ನು ಗಳಿಸಿಕೊಳ್ಳುವದೆ ಮಾನವತೆ ! ಅಂತೆಯೆ "ಏನಾದರೂ ಆಗು ಮೊದಲು ಮಾನವನಾಗು" ಎಂಬುದೇ ವಚನಕಾರರ ದಿವ್ಯ ಸಂದೇಶ. ಮಾನವನಾಗುವದು ಬಹಳ ಕಷ್ಟದ ಕೆಲಸ. ಮನುಷ್ಯ ಜನ್ಮಕ್ಕೆ ಬಂದ ಮೇಲೆ ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳದಿದ್ದರೆ ಹೇಗೆ ?

ಪ್ರಪಂಚದಲ್ಲಿ ಜನಿಸಿ ಬಂದ ಮಾನವನು ತನ್ನ ಬದುಕಿನ ಕೊನೆಯವರೆಗೆ ಜೀವನವನ್ನು ಕಳೆಯುತ್ತಾನೆಂಬುದು ಮುಖ್ಯ. ನಿದ್ರೆ, ಉದ್ಯೋಗ, ವಿಲಾಸಗಳಿಗಾಗಿಯೇ ಜನಸಾಮಾನ್ಯರ ಬಾಳು ಮೀಸಲಾಗಿರುತ್ತದೆ. ಶಿವನಿಗೊಪ್ಪಿತವಾಗುವಂತೆ



ಬದುಕುವವರು ಬಹು ವಿರಳ. ವಚನಕಾರರು ಇದಕ್ಕೆ ಹೊರತಾಗಿಲ್ಲ. ತಾವು ಸಾಗಿ ಬಂದ ಬದುಕಿನ ವಸಂತಗಳ ಸಿಂಹಾವಲೋಕನವನ್ನು ಮಾಡಿಕೊಂಡು ಅನಿಮಿಷನಾದ ಸ್ವತಂತ್ರಧೀರ ಸಿದ್ಧೇಶ್ವರನಿಗಾಗಿ ವ್ಯಯ ಮಾಡಿದ ಕಾಲವು ಮಾತ್ರ ನಿಮಿಷನೆಂದು ತಮ್ಮ ಜೀವನದ ಹೊತ್ತಿಗೆಯನ್ನೇ ತೆರೆದಿಟ್ಟಿದ್ದಾರೆ ವಚನದ ಮೂಲಕ!

"ನಾನು ಕಳೆದ ಐವತ್ತು ವತ್ಸರಗಳಲ್ಲಿ
ಹಸಿವು, ತೃಷೆ, ವಿಷಯ, ಆಸೆ
ಆಮಿಷಗಳಿಗಾಗಿ ವರುಷ ವರುಷ
ವಿರಾಮ ವಿನೋದ ಆಮೋದ
ವಿಲಾಸ ವಿಹಾರಗಳಿಗಾಗಿ ವರುಷ ವರುಷ
ಮೋಜು ಮೆರವಣಿಗೆ ಹರಟೆ
ಆತ್ಮಸ್ತುತಿ ಪರನಿಂದೆಗಳಿಗಾಗಿ ಮಾಸ ಮಾಸ
ಸುವಿಚಾರ, ಸದಾಚಾರ, ಸತ್ಕೃತಿಗಳಿಗಾಗಿ ದಿವಸ ದಿವಸ
ನಿನಗಾಗಿ ಕಳೆದ ಕಾಲ ಮಾತ್ರ ನಿಮಿಷ ನಿಮಿಷವಯ್ಯ"

ಮೇಲೆ ಕಂಡು ಬರುವ ಬದುಕಿನ ರೀತಿ ಕೇವಲ ಡಾ| ಸಿದ್ಧಯ್ಯ ಪುರಾಣಿಕರದಲ್ಲ, ಪ್ರತಿಯೊಬ್ಬರದು. ವೈಯಕ್ತಿಕವಾದುದಲ್ಲ ಸಾರ್ವತ್ರಿಕವಾದುದು. ಇಲ್ಲಿ 'ನಾನು' ಎಂಬ ಸರ್ವನಾಮವನ್ನು ವಚನಕಾರರು ಉಪಯೋಗಿಸಿದ್ದರೂ ಅದರಲ್ಲಿ ಸರ್ವರೂ ಒಳಗೊಂಡಿದ್ದಾರೆ. ಹಸಿವು-ತೃಷೆಗಳನ್ನು ಹಿಂಗಿಸಿಕೊಳ್ಳುವಲ್ಲಿ, ಆಮೋದ- ಪ್ರಮೋದ-ವಿಹಾರ-ವಿಲಾಸಗಳಲ್ಲಿ, ಮೋಜು-ಮೆರವಣಿಗೆಗಳಲ್ಲಿ, ಹರಟೆ-ಆತ್ಮಸ್ತುತಿ -ಪರನಿಂದೆಗಳಲ್ಲಿ, ನಿದ್ದೆ-ಕನಸು ಕಾಣುವದರಲ್ಲಿ ವ್ಯರ್ಥವಾಗಿ ಕಾಲ ಕಳೆಯುವ ನಾವು ಹುಟ್ಟಿ ಬಂದಿರುವದು ಇಷ್ಟಕ್ಕೇನೇ ಎಂದು ನಮ್ಮನ್ನು ನಾವೇ ಪರಾಮರ್ಶಿಸಿಕೊಳ್ಳಬೇಕಾಗುತ್ತದೆ. ಪಶುವಾಗದೆ ಪಶುಪತಿಯಾಗಬೇಕು; ಅದುವೇ ಹುಟ್ಟಿನ ಸಾರ್ಥಕತೆ; ಬದುಕಿನ ಗುಟ್ಟು! ವರುಷ ವರುಷವನ್ನು ವ್ಯರ್ಥವಾಗಿ ಕಳೆಯುವ ನಾವು ಆ ಭಗವಂತನ ಸ್ಮರಣೆಗಾಗಿ ಆ ವೇಳೆಯನ್ನೆ ಮೀಸಲಾಗಿಡಬೇಕು. ಸುವಿಚಾರ, ಸದಾಚಾರ, ಸತ್ಕೃತಿಗಳು ನಮ್ಮ ಬದುಕಿನಲ್ಲಿ ಪ್ರಮುಖ ಪಾತ್ರ ವಹಿಸಬೇಕು, ಅಂದಾಗಲೇ ನಾವು ಬದುಕಿ ಬಂದದ್ದು ಸಾರ್ಥಕವಾಗುತ್ತದೆ.

ಪ್ರತಿಯೊಂದು ಜೀವಿಗೂ ಹಕ್ಕು-ಕರ್ತವ್ಯಗಳು ಇದ್ದೇ ಇರುತ್ತವೆ. ಹಕ್ಕು ಬೇಕಾದವರು ಕರ್ತವ್ಯಗಳನ್ನು ಕಡೆಗಣಿಸಬಾರದು, ಸುಖ ಬೇಕು, ಆದರೆ ಜವಾಬ್ದಾರಿ ಬೇಡವೆಂದು ಹೇಳುವದು ಸಾಮಾಜಿಕ ಬದುಕಿಗೆ ಶಾಪವಾದೀತೆ ಹೊರತು ಎಂದಿಗೂ ವರವಾಗಲಾರದು.

"ಆರೋಗ್ಯ ಬೇಕು, ಆರೋಗ್ಯ ಸೂತ್ರಗಳ ಪಾಲನೆ ಬೇಡ;
ಸಂಸಾರ ಸುಖ ಬೇಕು, ಸಂಸಾರ ಹೊಣೆ ಬೇಡ ;
ಅಧಿಕಾರಬೇಕು, ಕರ್ತವ್ಯ ನಿರ್ವಹಣೆ ಬೇಡ ;
ಜನರ ಮತಗಳು ಬೇಕು, ಜನಹಿತ ಸಾಧನೆ ಬೇಡ ;
ಶಾಸನದ ರಕ್ಷೆ ಬೇಕು, ಶಾಸನದ ರಕ್ಷಣೆ ಬೇಡ ;
ವಿಶ್ವವಿದ್ಯಾಲಯದ ಪದವಿಬೇಕು, ಅಧ್ಯಯನ ಬೇಡ ;
ಧರ್ಮ ನೀಡುವ ಫಲ ಬೇಕೇ, ಧರ್ಮಾಚರಣೆ ಬೇಡ ;
ಸಮಾಜವೀನ ಸುಖಗಳು ಬೇಕು, ಸಮಾಜ ಸೇವೆ ಬೇಡ ;

ಈ ಬೇಕು-ಬೇಡಗಳು ಇಂದಿನ ಜನತೆಯ ಮನೋಧರ್ಮವನ್ನು ಚೆನ್ನಾಗಿ ಚಿತ್ರಿಸಿವೆ. ಕಷ್ಟಪಡದೆ ನಷ್ಟವಿರದ ಸುಖದ ಇಷ್ಟ ಅವರದು. ವಾಮಮಾರ್ಗ-ದಿಂದಲಾದರೂ ತಮಗೆ ಬೇಕಾದುದನ್ನು ಪಡೆಯುತ್ತಾನೆ ಇಂದಿನ ಮಾನವ. ಇದರಿಂದ ಸಮಾಜ ಜೀವನಕ್ಕೆ ಕುಷ್ಟರೋಗ ಬಡಿಯುತ್ತದೆ. ಇಂಥ ಸ್ವಾರ್ಥ ಸಾಧಕರಿಂದಲೇ ಆಧುನಿಕರ ಬಾಳು ಕಲುಷಿತವಾಗಿದೆಯೆಂಬ ವಿಚಾರಗಳ ಸಾಣೆ ಹಿಡಿದು ನಾಳಿನ ಬಾಳಿನಲ್ಲಿ ತೋರಿ ಬರಬಹುದಾದ ಓರೆಕೋರೆಗಳನ್ನು ಸಮಗೊಳಿಸುವ ಅನುಕಂಪನೆಯಿದೆ. ಅದರೊಡಲಲ್ಲಿ ಬಾಳಿನ ಬಗೆಗಿರುವ ಸದಾಶಯ ಕುಡಿಚಾಚಿ ಮಿಡಿಯಾಗುತ್ತಿದೆ.

ಈ ವಚನೋದ್ಯಾನದಲ್ಲಿ ವಿಹರಿಸುತ್ತಿರುವಾಗ ಅಂತಃಕರಣವನ್ನು ಮೂಲವಾಗಿಟ್ಟುಕೊಂಡದ್ದನ್ನು ಹಲವಾರು ವಚನಗಳಲ್ಲಿ ಕಾಣಬಹುದು. ಮಾನವೀಯ ಮೌಲ್ಯಗಳು ಇಂದು ಅಪಮೌಲ್ಯಗಳಾಗಿವೆ 'ಆದರ್ಶ' ಎನ್ನುವದು ಬಹುಶಃ ಅರ್ಥಕೋಶದಲ್ಲಿ ಕಂಡುಬರುವ ಪದವಾಗಿರಬೇಕೆ ವಿನಃ ಪ್ರತ್ಯಕ್ಷ ನಡವಳಿಕೆಯಲ್ಲಿ ಕಾಣಸಂತೆ ನಶಿಸಿ ಹೋಗಿದೆ. ಸ್ವಾರ್ಥ, ಸ್ವಜನಹಿತಾಸಕ್ತಿಗಳೇ ಇಂದು 'ಆದರ್ಶ' ಗಳ ಸ್ಥಾನವನ್ನು ಆಕ್ರಮಿಸಿವೆ. ಬುದ್ಧ, ಏಸು, ಬಸವ, ಗಾಂಧೀಜಿಯವರಂಥ ಮಹಾತ್ಮರು ಮಹಾಮಾನವರಾಗಿ, ಮಾನವತೆಯ ಉಳಿವಿಗಾಗಿ ಮೌಲ್ಯ ರಕ್ಷಣೆಗಾಗಿ ತಮ್ಮನ್ನು ತಾವೇ ಅರ್ಪಿಸಿಕೊಂಡುಹೋದರು. ಅದು ಇಂದು ಕೇವಲ ಚರಿತ್ರೆ ಮಾತ್ರ. ಆಧುನಿಕ ಮಾನವನಿಗೆ ಅಂಥ ಆದರ್ಶ ಪುರುಷರ ಜೀವನವೂ ಬೇಡ, ಅವರನ್ನು ಅನುಕರಿಸುವದೂ ಬೇಡವಾಗಿದೆ. ಬದುಕಿನಲ್ಲಿ ಕಂಡ ಕುಷ್ಟರೋಗಿ, ಮುಪ್ಪು, ಮರಣಗಳಿಂದ ಸಿದ್ಧಾರ್ಥನ ಮನಸ್ಸು ಜರ್ಝರಿತವಾಗಿ ಅರಮನೆಯ ಸುಖ-ಸಂಪದವನ್ನು ಚೆಲುವೆಯಾದ ಹೆಂಡತಿಯ ಭೋಗ ಭಾಗ್ಯವನ್ನು, ವಾತ್ಸಲ್ಯಮಯಿಯಾದ ತನ್ನ ಕರುಳಿನ ಕುಡಿಯನ್ನು ಸಹ ತೊರೆಯಲು ಹಿಂದೆ ಮುಂದೆ ನೋಡಲಿಲ್ಲ.



"ಮೂರೇ ಮೂರು ದುಸ್ಸಹ ದೃಶ್ಯಗಳನ್ನು ನೋಡಿ
ಅರಮನೆ, ರೂಪವತಿ ಸತಿ, ಸಿರಿಮೊಗದ ಮಗ
ಎಲ್ಲರನ್ನು ಎಲ್ಲವನ್ನೂ ತೊರೆದು ಹೊರಬಿದ್ದ ಬುದ್ಧದೇವಾ"

ಅಂದು ಆ ಗೌತಮನೇನೊ ಹೊರಬಿದ್ದು ಬುದ್ಧನಾದ. ವರಕವಿ ಅಂಬಿಕಾತನಯದತ್ತರು,

ಬುದ್ಧ, ಬುದ್ಧ -
ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ
ಮಡದಿ ಮಗು ಮನೆ-ಮಾರು ರಾಜ್ಯ-ಗೀಜ್ಯ
ಹೊತ್ತಿರುವ ಉರಿಯಲ್ಲಿ ಆಯಿತಾಜ್ಯ
.... .... .... .... .... .... .... .... ....
ಕಾಮ-ಕ್ರೋಧದ ದಾಟಿ, ಮದ-ಮತ್ಸರದ ತುಳಿದು
ಮೋಹ ಲೋಭದ ಮೆಟ್ಟಿ ಅಡಿ ಕಿತ್ತಿ ಇಟ್ಟ
ಇದೊ ತಗ್ಗು, ಅದೊ ಗುಡ್ಡ, ಅಗೊ ಮಲೆಯ ಬೆಟ್ಟ
ನೆಲ ಕೆಳಗೆ ಬಿಟ್ಟ.
.... .... .... .... .... .... .... ....
ಬುದ್ಧ – ಬುದ್ಧ – ಬುದ್ಧ
ಶಬ್ದ - ನಾದ ಧ್ವನಿಯ ಸದ್ದ ಮೀರಿದ್ದ
ಇಲ್ಲ ಎಂಬುದ ಕೊನೆಗೆ ಆತ್ಮ ಶುದ್ಧ
ಇದ್ದರೇನಿಲದಿದ್ದರೇನೆನಲು ಗೆದ್ದ"

ಅಂದು ಆ ಬುದ್ಧನೇನೊ ಹೊರಬಿದ್ದ. ಆದರೆ ಇಂದಿನ ಪ್ರಬುದ್ಧರು ಮೂರೇ ಕೆ ಸಾವಿರದ ಸಾವಿರ ಕರಾಳ ದೃಶ್ಯಗಳನ್ನು ಕಂಡರೂ, ಏನನ್ನು ಬಿಡಲಾರದಷ್ಟು ಹೇಡಿಗಳಾಗಿದ್ದಾರೆ. ಲೋಭಿಗಳಾಗಿದ್ದಾರೆ. ಕಾರಣ ಸ್ವಾರ್ಥ ಭೌತಿಕ ಬದುಕಿನ ನಂಟು. ಈ ಸ್ವಾರ್ಥಿಗಳಿಗೆ "ಒಳಗಿದ್ದು ಹೋರಾಡುವ ಧೈರ್ಯವಿಲ್ಲ; ಹೊರಬಿದ್ದು ಶುದ್ಧವಾಗುವ ಸ್ಥೈರ್ಯವಿಲ್ಲ" ಇಂಥ ನಿಲುವಿಗಿರುವ ಕಾರಣಗಳು ಇಲ್ಲಿಯ ವಚನದಲ್ಲಿ ಸುಂದರವಾಗಿ ಅಭಿವ್ಯಕ್ತಗೊಂಡಿವೆ

"ತತ್ವರಹಿತ ರಾಜಕಾರಣ
ಶ್ರಮರಹಿತ ಸಂಪತ್ತು
ನೀತಿಹೀನ ವ್ಯಾಪಾರ
ಶೀಲಶೂನ್ಯ ಶಿಕ್ಷಣ

ಮನಸ್ಸಾಕ್ಷಿಯಿಲ್ಲದ ಭೋಗ
ಮನುಷ್ಯತ್ವ ವಿರಹಿತ ವಿಜ್ಞಾನ
ತ್ಯಾಗವಿಹೀನ ಪೂಜನ"

ಇವೇ ಈ ದೇಶದಲ್ಲಿ ತುಂಬಿ ತುಳುಕುವ ಜೀವ ಧ್ವನಿಗಳಾಗಿವೆ. "ಏನೇನು ಈ ದೇಶದಲ್ಲಿ ಬರಬಾರದೆಂದು ಹೆಣಗಿ-ಹೆಣಗಿ ಬಲಿಯಾದೆಯೋ ಆ ಅನಿಷ್ಟಗಳೆಲ್ಲ ಬಂದಿವೆಯಿಲ್ಲಿ" ಎಂದು ಬಾಪೂಜಿಗೆ ಸಧ್ಯದ ಪರಿಸ್ಥಿತಿಯನ್ನು ನಿವೇದಿಸುತ್ತ "ಅಧೋಗತಿಗೆ ಹತ್ತಿರವಾಗುತ್ತಿದ್ದೇವೆ" ಆದ್ದರಿಂದ ಈ ನಾಶದತ್ತ ಹೊರಟಿರುವದನ್ನು ತಡೆದು, ಬಾಪೂಜಿ ತೋರಿದ ಸನ್ಮಾರ್ಗಗಳತ್ತ ದೇಶವನ್ನು ನಡೆಸುವಂತೆ ಸ್ವತಂತ್ರಧೀರ ಸಿದ್ಧೇಶ್ವರನನ್ನು ಪ್ರಾರ್ಥಿಸುತ್ತಾರೆ.

ಇಂಥ ಅನಿಷ್ಟಗಳಿಂದ ಮಾನವನಿಗೆ ಬಾಳಪಥದಲ್ಲಿ ಸುಕೃತಗಳನ್ನೆಸಗಲು ಸಮಯವೇ ಇಲ್ಲ, ಕೆಟ್ಟದ್ದನ್ನು ಮಾಡಲು ಸಮಯ ಸಾಕಷ್ಟಿದೆ. ಸತ್ಕಾರ್ಯಗಳಿಗೆ ವೇಳೆಯಿಲ್ಲ. ಸಮಾಜ ಸೇವೆಗೆ ಇಂಬಿಲ್ಲ. ಸತ್ಸಂಗಕ್ಕೆ ಎಡೆಯಿಲ್ಲ. ಎಲ್ಲೆಡೆಗೂ ಒಳ್ಳೆಯದಕ್ಕೆ ಸಮಯದ ಅಭಾವ ! ಆದರೆ ಸಿನಿಮಾಗಳ ಮುಂದೆ, ಟಿಕೀಟ ಕೊಳ್ಳಲು ತಾಸೆರಡು ತಾಸು ನಿಲ್ಲುವದಕ್ಕೆ, ದೂರದರ್ಶನದ ಮುಂದೆ ಗಂಟೆಗಟ್ಟಲೇ ಕೂಡ್ರಲಿಕ್ಕೆ ಸಮಯವಿದೆ. ಇಸ್ಪೇಟ ಆಟದಲ್ಲಿ ಹಗಲಿರಳು ವ್ಯಯಿಸಲು, ಹಾಳು ಹರಟೆಕೊಚ್ಚಲು- ಪರದೂಷಣೆಗಾಗಿ ಸಾಕಷ್ಟು ಸಮಯವಿದೆ

"ವ್ಯಾಸಂಗಕ್ಕೆ ಸಮಯವಿಲ್ಲ, ಸತ್ಸಂಗಕ್ಕೆ ಸಮಯವಿಲ್ಲ
ನಾಡು-ನುಡಿ ನಾಡಿಗರ ಸೇವೆಗೆ ಸಮಯವಿಲ್ಲ !
ಇನ್ನುಳಿದುದಕ್ಕೆ ಎಂತಾದರೂ ಸಮಯ ಸಿಕ್ಕುವುದಯ್ಯ !
ಜೂಜಿಗೆ, ಜಿದ್ದಿಗೆ, ಚಾಡಿಗೆ, ಕೇಡಿಗೆ, ನಿಂದೆಗೆ, ಸಿಂದಿಗೆ
ಎಲ್ಲ ದುರ್ವ್ಯಸನ, ದುರ್ವ್ಯಾಪಾರಗಳಿಗೂ ಸಮಯವಿದೆ."

ಆದರೆ ಸತ್ಕರ್ಮದಲ್ಲಿ ಮಾಗಿ ಆ ಭಗವಂತನನ್ನು ಕಾಣುವ ಮಾರ್ಗದಲ್ಲಿ ನಡೆಯಲು ಸಮಯವಿಲ್ಲ" ಎಂದು ನೊಂದುಕೊಂಡು ವಚನಿಸಿದ್ದಾರೆ. ಒಂದೆಡೆ ಹರಿತವಾದ ವ್ಯಂಗ್ಯ ವಿಜೃಂಭಿಸಿದ್ದರೆ ಇನ್ನೊಂದೆಡೆ ದುರ್ಮಾರ್ಗದಲ್ಲಿ ನಡೆಯುತ್ತಿರುವವರ ಬಗೆಗೆ ಕಳಕಳಿಯಿದೆ.

ವಚನೋದ್ಯಾನದಲ್ಲಿ ಉಪಮೆ, ರೂಪಕ, ದೃಷ್ಟಾಂತ, ವಿರೋಧಾಭಾಸ, ಮೊದಲಾದ ಅಲಂಕಾರಗಳರಳಿ ಘಮಘಮಿಸಿವೆ. ಸ-ರಸ-ಸವಿ ನೀಡಿವೆ. ಸಾನಂದಕ್ಕೆ ನಾಂದಿ ಹಾಡಿವೆ ಹೀಗಿದ್ದು ಇಲ್ಲಿ ಅರಳಿದ ಅಲಂಕಾರಗಳು ಅಲಂಕಾರಕ್ಕಾಗಿಯೇ



ಬಂದವುಗಳಲ್ಲ. ಸಾಹಿತ್ಯದ ರಂಜನೆಗಾಗಿ ಬಳಸಲ್ಪಟ್ಟಿಲ್ಲ. ಕವಿ ಪ್ರತಿಭೆಯಿಂದರಳಿ ಕಾವ್ಯ ಪ್ರಜ್ಞೆಯ ಮೂಲಕ ಹೊರಳಿ ವಚನಗಳ ವಿಶಿಷ್ಟ ಸೌಂದರ್ಯಕ್ಕೆ ಅರ್ಥಗೌರವಕ್ಕೆ ಸಾಕ್ಷಿಯಾಗಿವೆ. ಈ ಅಲಂಕಾರಗಳು, ನಮ್ಮ ಅಲಂಕಾರಿಕರು "ರಸಾತ್ಮಕಂ ವಾಕ್ಯಂ ಕಾವ್ಯಂ" "ರಮಣೀಯಾರ್ಥ ಪ್ರತಿಪಾದಕ ಶಬ್ದಃ ಕಾವ್ಯಂ" ಎಂದಿರುವಂತೆ ವಚನೋದ್ಯಾನದ ವಚನಗಳೆಲ್ಲ ರಮಣೀಯಾರ್ಥ ಶಬ್ದಗಳಿಂದ ಕೂಡಿಕೊಂಡು, ರಸಾನುಭವ ಉಂಟಾಗಿ ಓದುಗನಲ್ಲಿ ಆನಂದವನ್ನುಂಟು ಮಾಡುವ ಅದ್ಭುತ ಶಕ್ತಿ ಪಡೆದಿವೆ. ಇಲ್ಲಿ ತುಂಬೆಲ್ಲಾ ಅರಳಿದ ವಚನ ಕುಸುಮಗಳು ವಿಧ ವಿಧವಾಗಿದ್ದು, ಕಂಪು, ಇಂಪು, ಪೆಂಪು, ಬೀರುವದರಲ್ಲಿ ಸಾಕಷ್ಟು ಸಮರ್ಥವಾಗಿವೆ.

"ಗಂಡ ಬಯಸಿದುದನ್ನೇ ಹೆಂಡತಿ ಹೇಳದೆಯೆ ಮಾಡಿದಾಗ
ಆ ಅಡುಗೆಯ ರುಚಿಯೆಷ್ಟು !
ಸತಿ ಬಯಸಿದುದನ್ನೇ ಪತಿ ಹೇಳದೆಯೆ ತಂದಾಗ
ಆ ಒಡವೆಯ ಅನುಕೂಲ್ಯತೆಯೆಷ್ಟು !
.... .... .... .... .... .... .... ....
ಮಾತನೆ ಬಿತ್ತಿ ಮಾತನೆ ಬೆಳೆದು
ಮಾತಿನ ಎತ್ತುಗಳ ಕಟ್ಟಿ
ಮಾತಿನ ತೆನೆಗಳ ತುಳಿಸಿ
ಮಾತನೆ ತೂರಿ, ಮಾತಿನ ರಾಶಿ ಮಾಡಿಟ್ಟುಕೊಂಡರೆ
ಯಾತಕ್ಕೆ ಬರುವದಯ್ಯ"
.... .... .... .... .... .... .... ....
ಮುಗಿದ ಮೊಗ್ಗೆ ಬೆಳಗಿನ ಸುಳಿಗಾಳಿಗಾಗಿ ಕಾದಿರುವಂತೆ
ಕಾದಿಹೆನಯ್ಯ ನಿನ್ನ ಕರುಣಾ ಶ್ರಾವಣ ಸಮೀರಣಕ್ಕಾಗಿ;
ಬಿಗಿದ ತಂತಿ ಬಾಜಿಸಬಲ್ಲ ಬೆರಳಿಗಾಗಿ ಕಾದಿರುವಂತೆ
ಕಾದಿರುವೆನಯ್ಯ ನಿನ್ನ ಕೃಪಾಂಗುಲಿಯ ಮಿಡಿತಕ್ಕಾಗಿ!
.... .... .... .... .... .... .... ....
"ಚಂದ್ರನೊಲು ನನ್ನ ಕಲಂಕ ನನಗಿರಲಿ
ತನಿನಗೆಯ ತಂಪು ನಿಮಗಿರಲಿ
ಗುಲಾಬಿಯೊಲು ನನ್ನ ಮುಳ್ಳು ನನಗಿರಲಿ
ತನಿಗಂಪು ನಿಮಗಿರಲಿ
ಮರದೊಲು ಮಂದಾಗ್ನಿ ನನಗಿರಲಿ
ಪತ್ರ ಪುಷ್ಪ ಫಲ ನಿಮಗಿರಲಿ"

ವೆಂಬ ಆಧುನಿಕ ಉಪಮಾನಗಳ ಮೂಲಕ ವಾಚ್ಯದತ್ತ ವಾಲಿದ ಬದುಕಿನ ಪರಿಯನ್ನು ವ್ಯಂಜಕದತ್ತ ತೇಲುವಂತೆ, ವ್ಯಂಗ್ಯದತ್ತ ಹರಿಬಿಡದೆ ಧ್ವನಿಯತ್ತ ಧಾವಿಸುವಂತೆ ಶಬ್ದ ಪ್ರಪಂಚವನ್ನು ಮೌನವಲ್ಲದ ನಿಶ್ಶಬ್ದದತ್ತ ಕರೆದೊಯ್ಯುವ ವಚನಕಾರರ ಸಾಹಸ ಸಹಜ ಸುಂದರವಾಗಿದೆ. ವಚನಗಳ ಸೌಂದರ್ಯ ಹೆಚ್ಚಿದೆ. ಅರ್ಥಪೂರ್ಣವಾಗಿದೆ.

ಮನುಷ್ಯನ ಬಾಳನ್ನು ಬಂಡಿಗೆ, ಹಕ್ಕಿಗೆ ಹಾಗೂ ಹಣತೆಗೆ ಹೋಲಿಸಿದ ವಚನವೊಂದರ ಹೋಲಿಕೆಗಳಲ್ಲಿ ವಸ್ತು ಹಳೆಯದೆ ಇದ್ದರೂ ಹೇಳುವ ರೀತಿ ನವೀನವಾಗಿ ಮನಸ್ಸನ್ನು ಅರ್ಥ- ಸಾರ್ಥಕತೆಯತ್ತ ಆಕರ್ಷಿಸಬಲ್ಲವು ಎಂಬುದಕ್ಕೆ ಕೆಳಗಿನ ವಚನವೊಂದು ಶ್ರೇಷ್ಠ ಉದಾಹರಣೆ

"ಬಾಳ ಬಂಡಿಗೆ ಬುದ್ಧಿ ಭಾವಗಳೆರಡು ಗಾಲಿಗಳು
ಶೀಲವೇ ಕೀಲವಯ್ಯ
ಬಾಳ ಹಕ್ಕಿಗೆ ಅರ್ಥಕಾಮಗಳೆರಡು ರೆಕ್ಕೆಗಳು
ಧರ್ಮವೇ ಧಾರಣ ಶಕ್ತಿಯಯ್ಯ
ಬಾಳ ಹಣತೆಗೆ ರೀತಿ ನೀತಿಗಳೆ ಎಣ್ಣೆ ಬತ್ತಿಗಳು
ಪ್ರೀತಿಯೇ ಜ್ಯೋತಿಯಯ್ಯ
ಬಾಳ ಹಣ್ಣಿನಲ್ಲಿ ಶಕ್ತಿ-ರಕ್ತಿಗಳೇ ಬೀಜ ಸಿಪ್ಪೆಗಳು
ಭಕ್ತಿಯೇ ಮಧುರ ರಸವಯ್ಯ"

ಮನುಷ್ಯನ ಬಾಳನ್ನು ಸಾಗರಕ್ಕೂ, ಕಾನನಕ್ಕೂ ಹೋಲಿಸಿದ ಉದಾಹರಣೆಗಳು ಸಾಕಷ್ಟಿವೆ. ಡಿ. ವ್ಹಿ. ಜಿಯವರು, ತಮ್ಮ ಮಂಕು ತಿಮ್ಮನ ಕಗ್ಗದಲ್ಲಿ

"ಬದುಕು ಜಟಕಾ ಬಂಡಿ, ವಿಧಿಯದರ ಸಾಹೇಬ !
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು ||
ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು
ಪದ ಕುಸಿಯೆ ನೆಲವಿಹುದು ಮಂಕುತಿಮ್ಮ"

"ಬದುಕು ಜಟಕಾ ಬಂಡಿ" ಎಂದಿಷ್ಟೇ ಹೇಳಿ "ವಿಧಿ"ಯತ್ತ ಸಾಗಿದ್ದಾರೆ. ಆದರೆ ವಚನಕಾರರಾದ ಡಾ|| ಸಿದ್ಧಯ್ಯ ಪುರಾಣಿಕರು ಇನ್ನೂ ಮುಂದಕ್ಕೆ ಸಾಗಿದ್ದಾರೆ. ಈ ಬದುಕಿನ ಬಂಡಿ ಸುಸೂತ್ರವಾಗಿ ಸಾಗಬೇಕಾದರೆ ಗಾಲಿಗಳು ಅವಶ್ಯ ತಾನೆ ! ಇಲ್ಲಿ ಕಾವ್ಯಾನಂದರು ಈ ಬಾಳ ಬಂಡಿಗೆ "ಬುದ್ಧಿ-ಭಾವಗಳ" ಗಾಲಿಗಳನ್ನು ಜೋಡಿಸಿ ಅದು ಮುಗ್ಗರಿಸದಂತೆ ಮುನ್ನುಗ್ಗಲು 'ಶೀಲ' ವೆಂಬ ಕೀಲಗಳನ್ನು ಜೋಡಿಸಿ



ಅದಾ ಸಾದೃಶ್ಯಗಳೊಂದಿಗೆ ವೈಶಿಷ್ಟ್ಯಪೂರ್ಣವಾಗಿ ಅಭಿವ್ಯಕ್ತಗೊಳಿಸಿದ್ದನ್ನು ಕಾಣಬಹುದು.

"ದೇಹವನ್ನು ರಾಟೆಗೆ ಹೋಲಿಸಿ ಮೂಗಿನ ಕದಿರಿನಿಂದ ಉಸಿರೆಂಬ ನೂಲನ್ನು ನೇಯುತ್ತಿರುವದು ಕಾಣದ ಕೈ" ಎಂಬ ವಚನವು ರೂಪಕಲಂಕಾರಕ್ಕೆ ಒಂದು ಸುಂದರ ಮಾದರಿ.

"ಒಂಭತ್ತು ಬಾಗಿಲುಗಳಿಗೂ ಕದವಿಲ್ಲ
ಕೀಲಿಯಿಲ್ಲ
ಆದರೂ ರತ್ನ ಕಳವಾಗಿ ಹೋಗಿಲ್ಲ
ಇದುವರೆಗೂ"

ಬೆಡಗಿನ ವಚನಗಳನ್ನು ಸ್ಮರಣೆಗೆ ತರುವ ವಚನಗಳು ಅಲ್ಲಲ್ಲಿ ವಿರಾಜಿಸಿವೆ. ನುಡಿ ಹಳೆಯದಾದರೂ ಹೇಳಿದ ರೀತಿ ಹೊಸದು; ಕಲಾತ್ಮಕವಾದುದು.

ಡಾ|| ಸಿದ್ಧಯ್ಯ ಪುರಾಣಿಕರ ಈ ವಚನಗಳು ಆತ್ಮ ಗೀತೆಗಳಾದಂತೆ ಸಾಮಾಜಿಕ ವಿವೇಚನೆ, ಲೋಕ ವಿಮರ್ಶೆಗಳನ್ನೊಳಗೊಂಡಿವೆ. "ಈ ಸಂಗ್ರಹದ ಪ್ರತಿಯೊಂದು ವಚನರಚನೆಯ ವಿನ್ಯಾಸದಲ್ಲಿಯೂ ಅಂದಿನ ವಚನಕಾರರ ಎರಕವನ್ನು ಕಾಣಬಹುದು, ಸಂಕ್ಷಿಪ್ತ ನಿರೂಪಣೆ, ಮೊಟಕಾದ ವ್ಯಾಕರಣ, ಆರಂಭದ ಸಾಲನ್ನೋ ಸಾಲುಗಳನ್ನೋ ಮತ್ತೆ ಮತ್ತೆ ತರುವ ರಚನಾವಿಧಾನ, ರೂಪಕ ಉಪಮಾನಗಳಲ್ಲಿಯೇ ಮಾತಾಡುವ ಸೊಗಸು, ವಿರೋಧಾಭಾಸದ ಹೇಳಿಕೆಗಳಿಂದ ರಸೋತ್ಕರ್ಷವನ್ನುಂಟು ಮಾಡುವ ಜಾಣ್ಮೆ, ಸಾದೃಶ್ಯ, ವೈದೃಶ್ಯಗಳ ಸ್ಥಾಪನೆಯಿಂದ ತೆರದು ತೋರುವ ಆಕರ್ಷಣೆ ಮಾತಿನ ಅರ್ಥಗಳನ್ನು ಏರುಪೇರಾಗಿಸುವದರಿಂದೊದಗುವ ಉಲ್ಲಾಸ ಗತಿ, ಆರಾಧ್ಯ ದೈವವನ್ನು ಸಂಬೋಧಿಸುವುದರಲ್ಲಿಯೇ ಏರ್ಪಡುವ ಹೃದಯ ಸಂವಾದ- ಈ ಮುಂತಾದ ವಚನ ಲಕ್ಷಣಗಳೆಲ್ಲ ಇಲ್ಲಿನ ರಚನೆಗಳಲ್ಲಿ ನಿಚ್ಚಳವಾಗಿ ಕಾಣುತ್ತವೆ" ಎಂಬ ಜಾ. ಮಾ. ಸಾ ಅವರ ಮಾತುಗಳು ಈ ವಚನೋದ್ಯಾನದ ವಚನಗಳಿಗೆ ಬರೆದ ಭಾಷ್ಯವೆಂದರೆ ತಪ್ಪಾಗದು. ಶ್ರೀಯುತರ ಮುನ್ನುಡಿಯ ಕನ್ನಡಿಯಲ್ಲಿ ವಚನೋದ್ಯಾನದ ಪ್ರತಿಬಿಂಬ ಅತ್ಯಂತ ಸ್ಪಷ್ಟವಾಗಿ ಮೂಡಿದೆ.

"ಆಧುನಿಕ ವಚನಕಾರರ ಪ್ರಖ್ಯಾತ ಪಂಕ್ತಿಯಲ್ಲಿ ಸಿದ್ಧಯ್ಯ ಪುರಾಣಿಕರದು ಬಹು ದೊಡ್ಡ ಹೆಸರು. ಪರಂಪರೆಯನ್ನು ಬಿಡದೆ, ರಮ್ಯತೆ- ನವ್ಯತೆಗಳನ್ನು ಮರೆಯದೆ ಪರಿಸರಕ್ಕೆ ಸ್ಪಂದಿಸಿದವರು. ಸಹಜ ಸಂವೇದನೆಯನ್ನು ರೂಢಿಸಿಕೊಂಡವರು. ಅವರದು ಶಿಷ್ಟ ಶೈಲಿ ಆದರೂ ಸಾರ್ಥಕ ಸಾಹಿತ್ಯ. ಪ್ರಾಸಾನುಪ್ರಾಸಗಳ ಮೇಲೆ,

ಯಮಕದ ಮೇಲೆ ತುಂಬಾ ವ್ಯಾಮೋಹ ಅವರಿಗೆ. ಆದರೂ ಭಾಷೆಯ ಮೇಲೆ ಹಿಡಿತ ವಿಲ್ಲದಿಲ್ಲ. ಅವರ ಪ್ರಾಸಪ್ರೇಮ, ನಾನು-ನೀನು, ಸ್ಥಾವರ-ಜಂಗಮ, ಅಜ್ಞಾನ-ವಿಜ್ಞಾನ, ಹಳತು-ಹೊಸತು, ಮಾತು-ಮೌನ, ಮೇಲು-ಕೀಳು, ನಾಗರಿಕತೆ-ಸಂಸ್ಕೃತಿ ಇವೇ ಮೊದಲಾದ ದ್ವಂದ್ವ ಗುಣಗಳ ನಿರ್ಮಿತಿಗೆ ಕಾರಣವಾಗಿರುವದೂ ಉಂಟು. ಆದರೂ ವಿರುದ್ಧ ಗುಣಗಳ ಸುಂದರ ಸಮ್ಮಿಶ್ರಣವನ್ನು ಕಾಣುತ್ತೇವೆ. ಇಲ್ಲಿಯವು ಆಗೊಮ್ಮೆ ಈಗೊಮ್ಮೆ ಬರೆದ ಮುಕ್ತಕಗಳಾದ್ದರಿಂದ ಕೆಲವೆಡೆಗಳಲ್ಲಿ ವಿರೋಧಾಭಾಸ ಕಂಡು ಬರುತ್ತದೆ. ಅದು ಕವಿಗೆ ಕಾಲಕಾಲಕ್ಕೆ ಬದುಕು ಕಲಿಸಿದ ಪಾಠವೆಂದು ಗುರುತಿಸಬಹುದು. ಪ್ರಾಚೀನ ವಚನಗಳ ಸೊಬಗು, ಸೊಗಡುಗಳನ್ನು ಮೈಗೂಡಿಸಿಕೊಂಡಿದ್ದಾರೆ. ಸಂಸ್ಕೃತ, ಇಂಗ್ಲೀಷ, ಪರ್ಶಿಯನ್, ಉರ್ದು ಮೊದಲಾದ ಭಾಷಾ ಸಾಹಿತ್ಯದ ಸಂತತ ಅಧ್ಯಯನದಿಂದ ಶ್ರೀಮಂತರಾಗಿದ್ದಾರೆ. ಅವರ ಬಹುಶ್ರುತತ್ವ, ವಚನೋದ್ಯಾನದಲ್ಲಿ ಸ್ವಯಂ ವೇದ್ಯ. ಒಟ್ಟಿನಲ್ಲಿ ವಚನೋದ್ಯಾನ ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಿದ್ದ ಗಟ್ಟಿ ಕಾಳು; ಕನ್ನಡಕ್ಕೆ ಕೀರ್ತಿ ತಂದ ಕಾವ್ಯಾನಂದರ ಆಚಾರ್ಯ ಕೃತಿ" ಆಧುನಿಕ ವಚನ ಸಾಹಿತ್ಯದಲ್ಲಿ ವಚನೋದ್ಯಾನದ ಸ್ಥಾನವನ್ನು ಕುರಿತು ಡಾ|| ಸಾ. ಶಿ. ಮರುಳಯ್ಯನವರು ಆಡಿದ ಈ ನುಡಿಗಳು ಗಮನಾರ್ಹವಾಗಿವೆ.

ಜೀವ ಸುಸ್ತಾದಾಗ, ಮನಸ್ಸಿಗೆ ತುಕ್ಕು ಹಿಡಿದಾಗ "ವಚನೋದ್ಯಾನದಲ್ಲಿ ವಿಹಾರ" ಕೈಕೊಳ್ಳಬೇಕು. ಈ ಉದ್ಯಾನದ ತುಂಬೆಲ್ಲ ಅರಳಿ ವಿವಿಧ ಸೌರಭವನ್ನು ಸೂಸುವ ವಚನ ಕುಸುಮಗಳು ಜೀವಕ್ಕೆ ಚೈತನ್ಯವೀಯಬಲ್ಲವು, ಮನಕ್ಕೆ ಆನಂದವನ್ನು ಕೊಡಬಲ್ಲವು. ಬಾಳಿಗೆ ಬೆಳಕನ್ನಿತ್ತು ಅಜ್ಞಾನವನ್ನು ಹೊಡೆದೋಡಿಸಿ ಜೀವಾತ್ಮ-ಪರಮಾತ್ಮರ ಬೆಸುಗೆಯನ್ನು ಮಾಡಬಲ್ಲವು.